on that submission, the House proceeded with discussion. Ultimately, for want of time, as desired by the Government, an Appropriation Bill was moved and a Vote on Account was taken, the period of which sanction continues till 30th September, 1985.

Such being the case, the presentation of the Bill is contrary to the provisions of the Constitution of India and Rules of this House. Rules of Procedure 172 read with Article 202 and 203 of the Constitution of India, the Annual Statement of Account required for the whole year shall be submitted only once on the day determined by the Governor. Even the Governor has no powers to withdraw the date or fix another date for another Annual Financial Statement.

SRI M. S. KRISHNAN.—Sir, the hon. Member is not supposed to read.

MR. SPEAKER.—I have already allowed the Hon. Chief Minister to present the Budget.

ಅಧ್ಯಕ್ಷರು.—ಹಿಂದಿನಿಂದಲೂ ಇದೇ ರೀತಿಯ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಯಾವ ತಪ್ಪು ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಡ್ಜೆಟ್ ಭಾಷಣವನ್ನು ಮಾಡಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ನಾನು ನನ್ನ ನಿಲುವಳಿ ಸೂಚನೆಯಲ್ಲಿ ಯಾವ ವಿಷಯವನ್ನು ಪ್ರಸ್ತಾಪ ಮಾಡಿದ್ದೆ ಎಂದರೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳಿಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿರುವ ಬಗ್ಗೆ. ನಿಯಮ ೫೯ರ ಪ್ರಕಾರ ನಾನು ನೋಟೀಸ್ ಕಳುಹಿಸಿಕೊಟ್ಟಿದ್ದೆ. ಆ ಬಗ್ಗೆ ನನಗೆ ವಿವರ ಬೇಕು. ದಯಮಾಡಿ ನನಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ತಾವು ಹಿರಿಯ ಸದಸ್ಯರಿದ್ದೀರಿ. ದಯಮಾಡಿ ಈಗ ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಾವು ಈಗ ಅವಕಾಶ ಮಾಡಿ ಕೊಡಲಿಲ್ಲವೆಂದರೆ ನಾನು ಸಭೆಯಿಂದ ಸಭಾ ತ್ಯಾಗ ಮಾಡುತ್ತೇನೆ.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಾವು ನನಗೆ ಅವಕಾಶ ಮಾಡಿ ಕೊಡಬೇಕು. ಇಲ್ಲದಿದ್ದರೆ ನಾನು ಸಭಾತ್ಯಾಗ ಮಾಡಬೇಕಾಗುತ್ತದೆ

(ಮಾನ್ಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರು ಸಭಾತ್ಯಾಗ ಮಾಡಿದರು)

೧೯೮೫–೮೬ನೇ ಸಾಲಿನ ಆಯವ್ಯಯ ಮಂಡನೆ

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಬಡ್ಜೆಟ್ ಭಾಷಣವನ್ನು ಮಾಡಬಹುದು.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—ಈಗ ನಾನು ೧೯೮೫–೮೬ನೇ ವರ್ಷದ ಬಜೆಟ್ ಅಂದಾಜುಗಳನ್ನು ಮಾನ್ಯ ಸದನದ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೇ,

ನಾನೀಗ 1985–86ರ ಬಜೆಟ್ ಅಂದಾಜುಗಳನ್ನು ಮಂಡಿಸುತ್ತೇನೆ.

2. ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿ ಮತ್ತೊಮ್ಮೆ ತಲೆದೋರಿರುವ ಗಂಭೀರ ವಾತಾವರಣದಲ್ಲಿ ವಿಧಾನಮಂಡಲದ ಈ ಅಧಿವೇಶನವನ್ನು ನಡೆಸಲಾಗುತ್ತಿದೆ. ಹಲವಾರು ಜಿಲ್ಲೆಗಳಲ್ಲಿ ಮುಂಗಾರು ಪೂರ್ವ ಮಳೆಯಾಗಿದ್ದರೂ, ಕೃಷಿಕರು ಅಪಾರ ನಂಬಿಕೆ ಹಾಗೂ ನಿರೀಕ್ಷೆಗಳೊಂದಿಗೆ ಕೃಷಿ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಿದ್ದಾಗಲೇ ಮಳೆಯಾಗುವುದು ನಿಂತಿತು. ಬಿತ್ತಿದ ಬೀಜ ಒಣಗಿತು. ನಮ್ಮ ಜಲಾಶಯಗಳ ಪೈಕಿ ಹೆಚ್ಚಿನವು ಅರ್ಧದಷ್ಟು ತುಂಬಿಲ್ಲ, ಮತ್ತು ಹಲವಾರು ಜಲಾಶಯಗಳು ಈಗಲೂ ಬರಿದಾಗಿಯೇ ಉಳಿದಿವೆ. ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ನಾವು ಸುಮಾರು 175 ಕೋಟಿ ರೂಪಾಯಿಯಷ್ಟು ಹಣವನ್ನು ಕ್ಷಾಮ ಪರಿಹಾರಕ್ಕಾಗಿ ವೆಚ್ಚ ಮಾಡಿದ್ದೇವೆ. ಚೆನ್ನಾಗಿ ಮಳೆಯಾಗಿದ್ದರೆ ಈ ಹಣವನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿಯೇ ಮುಂತಾದ ನಮ್ಮ ಆದ್ಯತಾ ವಲಯಗಳ ಯೋಜನೆಗಳಿಗಾಗಿ ವೆಚ್ಚ ಮಾಡಬಹುದಾಗಿತ್ತು. ಈ ವರ್ಷವೂ ಹಲವಾರು ಜಿಲ್ಲೆಗಳಲ್ಲಿ ಪರಿಹಾರ ಕಾಮಗಾರಿಗಳ ಬಗ್ಗೆ ನಾವು ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದೇವೆ ಮತ್ತು ಹಣ ಬಿಡುಗಡೆ ಮಾಡಿದ್ದೇವೆ.

ಯೋಜನೆ

3. ನಾವು ಆರನೇ ಯೋಜನೆಯನ್ನು ಪೂರ್ಣಗೊಳಿಸಿ 7ನೇ ಯೋಜನೆಗೆ ಕಾಲಿರಿಸಿದ್ದೇವೆ. ಏಳನೇ ಯೋಜನೆಗೆ ನಿಧಿ ಒದಗಿ ಬರುವ ವಿಷಯದಲ್ಲಿ ನನಗೆ ಸಹಜವಾದ ಶಂಕೆ ಇತ್ತು. 1,80,000 ಕೋಟಿ ರೂಪಾಯಿಗಳ ರಾಷ್ಟ್ರೀಯ ಯೋಜನಾ ವೆಚ್ಚದಲ್ಲಿ ಕೇಂದ್ರ ಸರ್ಕಾರವು 40,000 ಕೋಟಿ ರೂಪಾಯಿ ಸಂಪನ್ಮೂಲಗಳ ಕೊರತೆಯನ್ನು ನಿರೀಕ್ಷಿಸಿದೆ.

4. ಆರನೇ ಯೋಜನೆಯ ಕೊನೆಯ ಭಾಗ ಹಾಗೂ ಏಳನೇ ಯೋಜನೆಯ ಪ್ರಾರಂಭ ಇವುಗಳ ನಡುವೆ ಒಂದು ವರ್ಷದ ನಿರ್ವಹಣಾ ಯೋಜನೆಯನ್ನು ವ್ಯವಸ್ಥೆ ಮಾಡಿ ಅದನ್ನು ಮಧ್ಯಕಾಲೀನ ಅವಧಿಯೆಂದು ಪರಿಗಣಿಸುವುದು ಅಪೇಕ್ಷಣೀಯವೆಂದು ಪ್ರಧಾನ ಮಂತ್ರಿಗಳಿಗೆ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಿಗೆ ಸಲಹೆ ನೀಡಿದ್ದೆ. ಹೀಗೆ ಮಾಡುವುದರಿಂದ ಚುನಾವಣೆಗಳ ತರುವಾಯ ಪುನರ್ರಚಿತವಾದ ಭಾರತ ಸರ್ಕಾರ ಮತ್ತು ಚುನಾವಣಾ ಆಯೋಗಗಳಿಗೆ ಯೋಜನಾ ನೀತಿಯನ್ನು ಪುನಃ ರೂಪಿಸಲು ಹಾಗೂ ಆದ್ಯತೆಗಳ ಬಗ್ಗೆ ಪುನರ್ವ್ಯವಸ್ಥೆ ಮಾಡಲು ಸಾಕಷ್ಟು ಕಾಲಾವಕಾಶ ದೊರೆತಂತಾಗುತ್ತಿತ್ತು. ಈ ಅವಧಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಸಭೆ ಸೇರಿ ಸಂಪನ್ಮೂಲಗಳ ಬಗೆಗಿನ ನಿರ್ಬಂಧ ಎಷ್ಟಾಗಬಹುದೆಂಬುದನ್ನು ಹಾಗೂ ರಾಷ್ಟ್ರೀಯ ಆದ್ಯತೆಗಳನ್ನು ಪರಿಶೀಲಿಸಬಹುದು ಎಂದೂ ಸಲಹೆ ಮಾಡಿದ್ದೆ. ಇದು, ನನ್ನ ಅಭಿಪ್ರಾಯದಲ್ಲಿ ಏಳನೇ ಪಂಚವಾರ್ಷಿಕ ಯೋಜನೆಗೆ ಹೆಚ್ಚು ಅರ್ಥಪೂರ್ಣ ಮಾರ್ಗ. ದುರದೃಷ್ಟವಶಾತ್ ಇದಕ್ಕೆ ಒಪ್ಪಿಗೆ ದೊರೆಯಲಿಲ್ಲ.

5. ಈ ವಿಷಯವನ್ನು ಕುರಿತು ನನಗಿದ್ದ ಶಂಕೆ ಈಗ ನಿಜವಾಗಿದೆಯೆಂದು ಭಾಸವಾಗುತ್ತದೆ. ಕೇಂದ್ರದ ಒಟ್ಟಾರೆ ಅನುಮೋದಿತ ಯೋಜನಾ ವೆಚ್ಚವು 1,80,000 ಕೋಟಿ ರೂಪಾಯಿಯಾದರೂ, ಯೋಜನಾ ಆಯೋಗದ ಭಾಷೆಯಲ್ಲಿ ಹೇಳುವುದಾದರೆ, ಕಣ್ಣಿಗೆ ಕಾಣುವ ಸಂಪನ್ಮೂಲಗಳು ಕೇವಲ 1,40,000 ಕೋಟಿ ರೂಪಾಯಿ ಮಾತ್ರ. ಇತ್ತೀಚೆಗೆ ನಡೆದ ಯೋಜನಾ ಆಯೋಗದ ಪೂರ್ಣ ಸದಸ್ಯರ ಸಭೆಯಲ್ಲಿ ಈ ಸಂಪನ್ಮೂಲದ ಕೊರತೆಯ ಪೈಕಿ 30,000 ಕೋಟಿ ರೂಪಾಯಿಯಷ್ಟನ್ನು ತುಂಬಿಸಲಾಗಿದ್ದು, ಅಂತಿಮ ಕೊರತೆ 10,000 ಕೋಟಿ ರೂಪಾಯಿ ಮಾತ್ರ ಎಂದು ನಮಗೆ ತಿಳಿದು ಬಂದಿದೆ. ಆದರೆ 7ನೇ ಯೋಜನಾವಧಿಯಲ್ಲಿ ಈ ಹೆಚ್ಚಿನ 30,000 ಕೋಟಿ ರೂಪಾಯಿಯನ್ನು ಹೇಗೆ ಸಂಗ್ರಹಿಸಲು ಉದ್ದೇಶಿಸಲಾಗಿದೆ ಎಂಬ ವಿವರವನ್ನು ಮಾತ್ರ ರಾಷ್ಟ್ರದ ಮುಂದೆ ಇರಿಸಿಲ್ಲ. 1985-86ರ ಕೇಂದ್ರ ಬಜೆಟ್‌ನಲ್ಲಿ ಏರ್ಪಾಟು ಮಾಡಿಲ್ಲದ ಕೊರತೆಯು ಸುಮಾರು 4,000 ಕೋಟಿ ರೂಪಾಯಿ ಎಂದು ಕಂಡುಬಂದಿದೆ. ರಾಜ್ಯಗಳ ಬಜೆಟ್‌ಗಳಲ್ಲೂ ಅಷ್ಟೇ ಪ್ರಮಾಣದ ಸ್ಥೈರ್ಯಗೆಡಿಸುವ ಬಜೆಟ್ ಕೊರತೆ ಉಂಟಾಗುವುದು, ನಿಜಕ್ಕೂ ಇದೊಂದು ಗಂಭೀರ ಪರಿಸ್ಥಿತಿ.

6. ಕೇಂದ್ರದ ಕೊರತೆಯನ್ನು ಕೊರತೆ ಅರ್ಥ ವ್ಯವಸ್ಥೆಯ ಮೂಲಕ ತುಂಬುವ ಸಂಭವವಿದೆ. ಕೇಂದ್ರ ಸರ್ಕಾರದ ಮಾರುಕಟ್ಟೆ ಸಾಲಗಳಲ್ಲಿ ರಿಜರ್ವ್ ಬ್ಯಾಂಕಿನ ಪಾಲು ಕ್ರಮೇಣ ಹೆಚ್ಚುತ್ತಾ ಬಂದಿರುವುದನ್ನು ನಾನು ಗಮನಿಸಿದ್ದೇನೆ. ಇದು ಕೊರತೆ ಅರ್ಥವ್ಯವಸ್ಥೆಯ ಇನ್ನೊಂದು ರೂಪವಾಗಿದೆ. ಪ್ರಸಕ್ತ ವರ್ಷ ಕೇಂದ್ರ ಸರ್ಕಾರದ ಮಾರುಕಟ್ಟೆ ಸಾಲದ ಪೈಕಿ ಸರಿಸುಮಾರು ಶೇಕಡ 50 ರಷ್ಟನ್ನು ಈಗಾಗಲೇ ಎತ್ತಲಾಗಿದೆ. ಅದರಲ್ಲಿ ರಿಜರ್ವ್ ಬ್ಯಾಂಕಿನ ಪಾಲು ಅದರ ಸುಮಾರು ಅರ್ಧದಷ್ಟು. ಈ ಎಲ್ಲ ಬೆಳವಣಿಗೆಗಳು ಪ್ರಸ್ತುತಃ ಹಣದುಬ್ಬರದ ಲಕ್ಷಣಗಳನ್ನು ಹೊಂದಿವೆ. ಮುಂದಿನ ಐದು ವರ್ಷಗಳ ಅವಧಿಯಲ್ಲಿ ಹಣದುಬ್ಬರದ ದರವನ್ನು ಸೂಕ್ತ ಮಿತಿಯೊಳಗೆ ಇರಿಸದಿದ್ದರೆ ಏಳನೇ ಯೋಜನೆಯು ಮಹತ್ವವಷ್ಟೇ ಏಕೆ, ಅದು ತನ್ನ ಅರ್ಥವನ್ನೇ ಕಳೆದುಕೊಳ್ಳುವುದೆಂಬ ಭಯ ನನಗಿದೆ. ಈ ಪರಿಸ್ಥಿತಿಯಲ್ಲಿ ವ್ಯಾಪಕವಾದ ಪುನರವಲೋಕನ ಹಾಗೂ ದೃಢ ನಿರ್ಧಾರಗಳು ತೀರ ಅವಶ್ಯವಾಗಿವೆ.

7. ಕರ್ನಾಟಕದಲ್ಲಿ, ಆರನೇ ಯೋಜನೆಗಾಗಿ ಮೊದಲು ಅಂಗೀಕೃತವಾಗಿದ್ದ ಯೋಜನಾ ವೆಚ್ಚ 2265 ಕೋಟಿ ರೂಪಾಯಿ. ಆದರೆ ಆಗಿರುವ ವಾಸ್ತವಿಕ ವೆಚ್ಚ 2626.32 ಕೋಟಿ ರೂಪಾಯಿ–ಎಂದರೆ 361.32 ಕೋಟಿ ರೂಪಾಯಿಗಳಷ್ಟು ಹೆಚ್ಚಳವಾಗಿದೆ.

8. ಈ ಭಾಷಣದ I ಅನುಬಂಧವು ಐದು, ಆರು, ಮತ್ತು ಏಳನೇ ಯೋಜನಾ ಅವಧಿಗಳಲ್ಲಿ ಯೋಜನೆಯ ಬಗ್ಗೆ ಮಾಡಬೇಕಾದ ತಲಾವಾರು ವಿನಿಯೋಗ, ವಿಧಿಸಬೇಕಾದ ತಲಾವಾರು ತೆರಿಗೆ ಹಾಗೂ ಯೋಜನೆಗೆ ಹಣ ಒದಗಿಸಲು ಬೇಕಾದ ಕೇಂದ್ರದ ನೆರವು ಮತ್ತು ರಾಜ್ಯದ ಸ್ವಂತ ಸಂಪನ್ಮೂಲಗಳ ನಡುವಣ ಪ್ರಮಾಣದ ಬಗ್ಗೆ ಮಾಹಿತಿ ನೀಡುತ್ತದೆ.

9. ಆರನೇ ಯೋಜನಾವಧಿಯಲ್ಲಿ ರಾಜ್ಯದ ಅಭಿವೃದ್ಧಿಗೆ ಸಂಸಂಗತವಾಗಿದ್ದ ಕೆಲವು ಪ್ರಮುಖ ಆರ್ಥಿಕ ಸ್ಥಿತಿಗತಿಗಳು ಈ ಮುಂದಿನಂತಿವೆ :

(ಎ) ಆರನೇ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ (1980–83) ಒಟ್ಟು ಯೋಜನಾ ವೆಚ್ಚದ ಶೇಕಡಾ 50 ರಷ್ಟನ್ನು ಮಾತ್ರ ವೆಚ್ಚ ಮಾಡಲಾಗಿದ್ದು, ಉಳಿದ ಶೇಕಡಾ 50 ರಷ್ಟನ್ನು ಯೋಜನೆಯ ಕೊನೆಯ ಎರಡು ವರ್ಷಗಳಲ್ಲಿ (1983–85) ಮಾಡಲಾಗಿದೆ.

(ಬಿ) ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮಗಳ ಬಗೆಗಿನ ವೆಚ್ಚ ಮೊದಲು ಅಂಗೀಕೃತವಾಗಿದ್ದ ಒಟ್ಟು ವೆಚ್ಚಕ್ಕಿಂತ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. 1980–82ನೇ ಡಿಸೆಂಬರ್ ಅವಧಿಯಲ್ಲಿ ಮಾಡಲಾದ ವೆಚ್ಚ ಸುಮಾರು 50 ಕೋಟಿ ರೂಪಾಯಿಯಾದರೆ, ಕೊನೆಯ ಎರಡು ವರ್ಷಗಳಲ್ಲಿ ಮಾಡಿದ ವೆಚ್ಚ 85 ಕೋಟಿ ರೂಪಾಯಿ.

(ಸಿ) 1980–83ರ ಅವಧಿಯಲ್ಲಿ ಕಾವೇರಿ ಜಲಾನಯನ ಯೋಜನೆಗಳ ಬಗೆಗಿನ ಸರಾಸರಿ ವೆಚ್ಚ ವರ್ಷವೊಂದಕ್ಕೆ ಸುಮಾರು 30 ಕೋಟಿ ರೂಪಾಯಿ ಮಾತ್ರ ಆಗಿತ್ತು. ಕಳೆದ ಎರಡು ವರ್ಷಗಳಲ್ಲಿ ಇದನ್ನು ವರ್ಷವೊಂದಕ್ಕೆ 60 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಪ್ರಮಾಣಕ್ಕೆ ಏರಿಸಲಾಗಿದೆ.

(ಡಿ) ಕಳೆದ ಎರಡು ವರ್ಷಗಳಲ್ಲಿ ಕ್ಷಾಮ ಪರಿಹಾರ ಕಾರ್ಯಕ್ರಮದ ಸಂಬಂಧದಲ್ಲಿ ನಾವು 174.67 ಕೋಟಿ ರೂಪಾಯಿ ಹಣ ವೆಚ್ಚ ಮಾಡಬೇಕಾಯಿತು. ಇದು ಕೇಂದ್ರ ಸರ್ಕಾರವು ನೀಡಿದ್ದ 40 ಕೋಟಿ ರೂಪಾಯಿ ನೆರವಿಗಿಂತ ಬಹಳಷ್ಟು ಹೆಚ್ಚಿನ ಮೊತ್ತವಾಗಿದೆ.

(ಇ) ಆರನೇ ಯೋಜನಾವಧಿಯಲ್ಲಿ ಸರ್ಕಾರಿ ನೌಕರರಿಗೆ ಮತ್ತು ಅನುದಾನ ಪಡೆಯುವ ಸಂಸ್ಥೆಗಳ ನೌಕರರಿಗೆ ತುಟ್ಟಿಭತ್ಯ ಸಂದಾಯ ಮಾಡುವ ಬಗ್ಗೆ ನಾವು 642.42 ಕೋಟಿ ರೂಪಾಯಿ ವೆಚ್ಚ ಮಾಡಿದೆವು. ಆದರೆ ಆ ಬಗ್ಗೆ ಮೊದಲು ನಿರೀಕ್ಷಿಸಿದ ಮೊಬಲಗು ಕೇವಲ 112 ಕೋಟಿ ರೂಪಾಯಿ ಮಾತ್ರ.

(ಎಫ್) ಸಮಾಜ ಮತ್ತು ಸಮುದಾಯ ಸೇವೆಗಳಿಗೆ ಹಾಗೂ ಔದ್ಯಮಿಕ ವಲಯಗಳಿಗೆ ಸಂಬಂಧಿಸಿದ ವೆಚ್ಚವನ್ನು ಯೋಜನೆಯ ಕೊನೆಯ ಎರಡು ವರ್ಷಗಳ ಅವಧಿಯಲ್ಲಿ ಗಣನೀಯವಾಗಿ ಹೆಚ್ಚಿಸಲಾಗಿದೆ. 1980–83ರಲ್ಲಿ ಇದು 259 ಕೋಟಿ ರೂಪಾಯಿ ಆಗಿತ್ತು. 1983-85ರಲ್ಲಿ ಸಮಾಜ ಮತ್ತು ಸಮುದಾಯ ಸೇವೆಗಳಿಗಾಗಿ 305 ಕೋಟಿ ರೂಪಾಯಿ ಆಗಿದೆ. 1980–83ರಲ್ಲಿ ಉದ್ಯಮಗಳಿಗಾಗಿ ಆಗಿರುವ ವೆಚ್ಚ 130 ಕೋಟಿ ರೂಪಾಯಿ ಹಾಗೂ 1983–85ರ ಅವಧಿಯ ನಿರೀಕ್ಷಿತ ವೆಚ್ಚ 124 ಕೋಟಿ ರೂಪಾಯಿ.

(ಜಿ) ಬಡ್ಡಿ ಧನ ಸಹಾಯ, ನೀರು ದೊರೆಯದ ಬಾವಿಗಳಿಗೆ ರಿಯಾಯಿತಿ, ಬಾಕಿಗಳನ್ನು ಮನ್ನಾ ಮಾಡುವುದೇ ಮುಂತಾದವುಗಳ ಮೂಲಕ ರೈತರಿಗೆ ನಾವು ನೀಡಿದ ವಿವಿಧ ಪರಿಹಾರ ಮತ್ತು ರಿಯಾಯಿತಿಗಳಿಗೆ ಸುಮಾರು 87 ಕೋಟಿ ರೂಪಾಯಿ ವೆಚ್ಚ ತಗಲಿತು.

(ಹೆಚ್) 1980–83ರ ಅವಧಿಯಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನವೇ ಮುಂತಾದ ಸಾಮಾಜಿಕ ಭದ್ರತಾ ಕ್ರಮಗಳ ಬಗ್ಗೆ ಮಾಡಿದ ವೆಚ್ಚ 52 ಕೋಟಿ ರೂಪಾಯಿ. 1983–85ರ ಅವಧಿಯಲ್ಲಿ ಇದನ್ನು 62 ಕೋಟಿ ರೂಪಾಯಿಗೆ ಏರಿಸಲಾಯಿತು.

(ಐ) ಈ ಮೊದಲು ನಿರೀಕ್ಷಿಸಲಾದ 457.71 ಕೋಟಿ ರೂಪಾಯಿ ಮೊಬಲಗಿಗೆ ಪ್ರತಿಯಾಗಿ ಹೆಚ್ಚುವರಿ ಸಂಪನ್ಮೂಲ ಶೇಖರಣಾ ಕ್ರಮಗಳ ಮೂಲಕ 789.95 ಕೋಟಿ ರೂಪಾಯಿ ಮೊಬಲಗನ್ನು ಸಂಗ್ರಹಿಸಿದ್ದೇವೆ.

10. 1984-85ರ ಅವಧಿಯಲ್ಲಿ 20 ಅಂಶಗಳ ಕಾರ್ಯಕ್ರಮಗಳ ಅಡಿಯಲ್ಲಿ ರಾಜ್ಯದ ಸಾಧನೆಗೆ ಸಂಬಂಧಿಸಿದಂತೆ ಯೋಜನಾ ಆಯೋಗವು ಮಾಡಿದ ಮೌಲ್ಯ ನಿರ್ಧರಣೆಯನ್ನು ಅನುಬಂಧ-II ರಲ್ಲಿ ತೋರಿಸಲಾಗಿದೆ.

ಆರ್ಥಿಕ ಸ್ಥಿತಿಗತಿ

11. ನಮ್ಮ ಪ್ರಸಕ್ತ ಆರ್ಥಿಕ ತೊಂದರೆಗಳನ್ನು ಈ ಸಂದರ್ಭಕ್ಕೆ ತಕ್ಕಂತೆ ಪರಿಶೀಲಿಸಬೇಕಾಗಿದೆ. ಕರ್ನಾಟಕವು 'ಓವರ್ ಡ್ರಾಫ್ಟ್' ಸೌಲಭ್ಯಕ್ಕೆ ಮೊರೆ ಹೋಗುವುದು ಅನಿವಾರ್ಯವಾಯಿತು. ಆದರೆ ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ ನಾವು ವಿಫಲರಾದುದಾಗಲಿ, ಯೋಜನೇತರ ಮತ್ತು ಲಾಭದಾಯಕವಲ್ಲದ ಮನಸೋ ಇಚ್ಛೆಯ ಯೋಜನೆಗಳಿಗಾಗಿ ಅನಿಯಂತ್ರಿತ ರೀತಿಯಲ್ಲಿ ವೆಚ್ಚ ಮಾಡಿದುದಾಗಲೀ, ಇದಕ್ಕೆ ಕಾರಣವಲ್ಲ. ಹೀಗಿದ್ದರೂ ಸಹ, ಈ ಓವರ್ ಡ್ರಾಫ್ಟಿನ ವಿಚಾರದಲ್ಲಿ ನನಗೆ ಸಮಾಧಾನವಿಲ್ಲ. ಓವರ್ ಡ್ರಾಫ್ಟ್ ಪದ್ಧತಿಯನ್ನು ರೂಢಿಸಿಕೊಳ್ಳುವುದು ಆರ್ಥಿಕ ಅಶಿಸ್ತಿನ ಲಕ್ಷಣವಷ್ಟೇ ಅಲ್ಲ; ಅದು ಹಣದುಬ್ಬರದ ಒತ್ತಡಗಳನ್ನು ಇನ್ನಷ್ಟು ತೀವ್ರಗೊಳಿಸುತ್ತದೆ ಹಾಗೂ ಯೋಜನೆಯ ವಿಧಾನ ಶಾಸ್ತ್ರವನ್ನೇ ವಿರೂಪಗೊಳಿಸುತ್ತದೆ. ಆದ್ದರಿಂದ ಓವರ್ ಡ್ರಾಫ್ಟ್ ಸೌಲಭ್ಯಗಳನ್ನು ದುರುಪಯೋಗ ಪಡಿಸಿಕೊಳ್ಳುವ ಅನಾರೋಗ್ಯಕರ ಪದ್ಧತಿಯನ್ನು ಕೊನೆಗಾಣಿಸುವ ದಿಶೆಯಲ್ಲಿ ಕೇಂದ್ರ ಅರ್ಥ ಮಂತ್ರಿಯವರು ಆರಂಭಿಸಿದ ಕ್ರಮವನ್ನು ನಾನು ಪ್ರಶಂಸಿಸಿದ್ದೆ ಹಾಗೂ ಮನಃಪೂರ್ವಕವಾಗಿ ಸ್ವಾಗತಿಸಿದ್ದೆ. ಆದರೆ ಅವರು ಮೊದಲಿಗೆ ಭಾರತ ಸರ್ಕಾರದ ಆರ್ಥಿಕ ನಿರ್ವಹಣೆಯಲ್ಲಿ ಶಿಸ್ತನ್ನು ಕಡ್ಡಾಯಗೊಳಿಸಿದ ಹೊರತು ರಾಜ್ಯ ಸರ್ಕಾರಗಳ ಆರ್ಥಿಕ ನಿರ್ವಹಣೆಯಲ್ಲಿ ಶಿಸ್ತನ್ನು ಜಾರಿಗೆ ತರುವ ಪ್ರಯತ್ನಗಳು ಫಲಕಾರಿಯಾಗಲಿಕ್ಕಿಲ್ಲ.

12. 1985ರ ಜನವರಿ 28 ರಂದು ಭಾರತದ ರಿಜರ್ವ್ ಬ್ಯಾಂಕಿನಿಂದ ಆಗ ಪ್ರಚಲಿತವಿದ್ದ ಹಂತಗಳಲ್ಲಿ ರಾಜ್ಯಗಳು ಪಡೆದಿದ್ದ ಓವರ್ ಡ್ರಾಫ್ಟನ್ನು ಭಾರತ ಸರ್ಕಾರವು ಸ್ಥಗಿತಗೊಳಿಸಿತು. ಆಗ ಕರ್ನಾಟಕದ ಓವರ್ ಡ್ರಾಫ್ಟಿನ ಮೊತ್ತ

245.80 ಕೋಟಿ ರೂಪಾಯಿ ಆಗಿತ್ತು. ಈ ಮೊಬಲಗನ್ನು 4 ವರ್ಷಗಳಲ್ಲಿ ಮರು ಸಂದಾಯ ಮಾಡಬೇಕೆಂದು ಭಾರತ ಸರ್ಕಾರದವರು ಹೇಳಿದ್ದಾರೆ. ಈಗಿನ ಓವರ್ ಡ್ರಾಫ್ಟ್‌ಗಳನ್ನು 1990 ರಿಂದ ಆರಂಭಿಸಿ 15 ವರ್ಷಗಳ ಅವಧಿಯಲ್ಲಿ ಮರು ಸಂದಾಯ ಮಾಡಬೇಕಾದ ದೀರ್ಘಕಾಲೀನ ಸಾಲವಾಗಿ ಪರಿವರ್ತಿಸಬೇಕೆಂದು ಮತ್ತು ಈಗಾಗಲೇ ಸಂಪನ್ಮೂಲ ನಿರ್ಬಂಧಗಳಿಂದ ಮೊಟಕುಗೊಂಡ 7ನೇ ಯೋಜನಾ ವೆಚ್ಚವನ್ನು ಈ ಹೊಣೆ ಮತ್ತಷ್ಟು ಮೊಟಕುಗೊಳಿಸುವುದನ್ನು ತಪ್ಪಿಸಬೇಕೆಂದು ನಾನು ಕೇಂದ್ರದ ಹಣಕಾಸು ಮಂತ್ರಿಗಳಿಗೆ ಸಲಹೆ ಮಾಡಿದ್ದೆ. ರಾಜ್ಯಗಳ ಏಳನೇ ಯೋಜನಾ ಹಿತಾಸಕ್ತಿಯನ್ನು ಸಂರಕ್ಷಿಸುವ ಉದ್ದೇಶಕ್ಕಾಗಿ ಕೇಂದ್ರ ಅರ್ಥ ಮಂತ್ರಿಯವರು ತಮ್ಮ ನಿರ್ಧಾರವನ್ನು ಮತ್ತೊಮ್ಮೆ ಪರಿಶೀಲಿಸುವರೆಂದು ನಂಬಿದ್ದೇನೆ.

13. ಏಳನೇ ಯೋಜನೆಯನ್ನು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಇನ್ನೂ ಅಂತಿಮಗೊಳಿಸಿಲ್ಲ. ರಾಜ್ಯದ ಏಳನೇ ಯೋಜನೆಗಾಗಿ ನಾವು 5500 ಕೋಟಿ ರೂಪಾಯಿ ಒಟ್ಟು ವೆಚ್ಚಕ್ಕಾಗಿ ಪ್ರಸ್ತಾವಿಸಿದ್ದರೂ, ಯೋಜನಾ ಆಯೋಗವು ಕೇವಲ 3500 ಕೋಟಿ ರೂಪಾಯಿ ವೆಚ್ಚದ ಯೋಜನೆಗೆ ಅನುಮತಿ ನೀಡಿದೆ. ರಾಜ್ಯದ ಈಗಿರುವ ಅಭಿವೃದ್ಧಿಯ ಗತಿಯನ್ನು ತ್ವರೆಗೊಳಿಸಲು ಇದು ಎಷ್ಟಕ್ಕೂ ಸಾಕಾಗುವುದಿಲ್ಲ. ಆದಕಾರಣ ನಾವು ಇದನ್ನು ಕೇವಲ ತಾತ್ಕಾಲಿಕವೆಂದು ಅಂಗೀಕರಿಸಿ, ನಾವು ಪ್ರಸ್ತಾವಿಸಿದ ವೆಚ್ಚಕ್ಕೆ ನಮಗೆ ಅನುಮತಿ ದೊರಕಬಹುದೆಂದು ನಾನು ಆಶಿಸುತ್ತೇನೆ.

ಯೋಜನಾ ಉದ್ದೇಶಗಳು :

14. ಆಹಾರ, ಉದ್ಯೋಗ ಮತ್ತು ಉತ್ಪಾದನೆಗಳು ಏಳನೇ ಯೋಜನೆಯ ಮೂರು ಪ್ರಧಾನ ಉದ್ದೇಶಗಳಾಗಿವೆ. ಮಾನವನ ಸರ್ವತೋಮುಖ ಅಭಿವೃದ್ಧಿಯೇ ಪ್ರಮುಖ ಉದ್ದೇಶವಾಗಿರಬೇಕೆಂಬುದು ನನ್ನ ವಿಚಾರ. ಜೀವನ ಮೌಲ್ಯವನ್ನು ಅದರಲ್ಲೂ ವಿಶೇಷವಾಗಿ ಕಳೆದ 25 ವರ್ಷಗಳ ಯೋಜನೆ ಹಾಗೂ ಅಭಿವೃದ್ಧಿಯ ಅವಧಿಯಲ್ಲಿ ಅವುಗಳು ಯಾರಿಗೆ ನಿಲುಕಿಲ್ಲವೋ ಅಂಥ ಜನರ ಮತ್ತು ಸಮತೋಲನವಿಲ್ಲದ ಅಭಿವೃದ್ಧಿ ವಿಧಾನದಿಂದಾಗಿ ಹುಟ್ಟಿಕೊಂಡ ಹೊಸ ಆರ್ಥಿಕ ಮತ್ತು ಸಾಮಾಜಿಕ ಶಕ್ತಿಗಳ ಪರಿಣಾಮವಾಗಿ ಯಾರ ಸ್ಥಿತಿಗತಿಗಳು ಇನ್ನಷ್ಟು ಕೆಟ್ಟಿವೆಯೋ ಅಂಥ ಜನರ ಜೀವನ ಮೌಲ್ಯವನ್ನು ಯೋಜನೆಯು ಸುಧಾರಿಸಬೇಕು.

15. 21ನೇ ಶತಮಾನಕ್ಕೆ ಪದಾರ್ಪಣ ಮಾಡಲು ಭಾರತವು ಸಿದ್ಧವಾಗಬೇಕೆಂದು ನಮಗೆ ಹೇಳಲಾಗುತ್ತಿದೆ. ನಮ್ಮ ಜನತೆಯ ಶೇಕಡಾ 50ಕ್ಕಿಂತಲೂ ಹೆಚ್ಚು ಜನ ಇನ್ನೂ ದಾರಿದ್ರ್ಯ ರೇಖೆಗಿಂತ ಕೆಳಗಿದ್ದಾರೆ. ನಮ್ಮ ಜನತೆಯ ಶೇಕಡಾ 64ರಷ್ಟು ಜನರು ಅನಕ್ಷರಸ್ಥರು ಮತ್ತು ಶೇಕಡಾ 30ರಷ್ಟು ವಯಸ್ಕರು ನಿರುದ್ಯೋಗಿಗಳಾಗಿದ್ದಾರೆ. ಒಂಬತ್ತು ಮಕ್ಕಳ ಪೈಕಿ ಒಂದು ಮಗು ಒಂದು ವರ್ಷ ತುಂಬುವ ಮೊದಲೇ ಸಾವನ್ನಪ್ಪುತ್ತದೆ. ರಾಷ್ಟ್ರದ ಸುಮಾರು 30 ಲಕ್ಷ ಜನರು ಅಂಧರು, ಅವರ ಪೈಕಿ ಆರು ಲಕ್ಷದಷ್ಟು ಮಕ್ಕಳು. ಇವರ ಅಂಧತ್ವಕ್ಕೆ

ಪೌಷ್ಟಿಕ ಆಹಾರದ ಕೊರತೆಯೇ ಕಾರಣ. ಇಂಥ ಪರಿಸ್ಥಿತಿಯಲ್ಲಿ ಕಂಪ್ಯೂಟರ್ ಯಂಗಕ್ಕೆ ಉಪಕ್ರಮಿಸುವ ಕಲ್ಪನೆ ಕೇವಲ ಹಾಸ್ಯಾಸ್ಪದ; ಆದ್ದರಿಂದ, 21ನೇ ಶತಮಾನದೆಡೆಗೆ ಸಾಗಲು ನಾವು ಅತ್ಯಾಧುನಿಕ ತಂತ್ರಜ್ಞಾನ ಮತ್ತು ವೈಜ್ಞಾನಿಕ ಅಭಿವೃದ್ಧಿಯ ಪೂರ್ಣ ಲಾಭವನ್ನು ಪಡೆಯಬೇಕಾದರೂ ಈ ಜನರನ್ನು ಕಡೆಗಣಿಸಿ ಅವರನ್ನು 19ನೇ ಶತಮಾನದಲ್ಲೇ ಉಳಿಸುವುದು ಸಾಧ್ಯವಿಲ್ಲ. ಆರ್ಥಿಕ ಅಭಿವೃದ್ಧಿಯ ಬಗೆಗಿನ ನಮ್ಮ ಧೋರಣೆಯು ಗಾಂಧೀಜಿಯವರು ಪ್ರತಿಪಾದಿಸಿದ ಧೋರಣೆಯಾಗಿರಬೇಕು.

ಜನತಾ ವಲಯ

16. ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ, ಹಲವಾರು ಪ್ರಯೋಗಗಳನ್ನು ಪ್ರಯತ್ನಿಸಿದ್ದಾಗಿದೆ, ನೋಡಿದ್ದಾಗಿದೆ. ಈ ಎಲ್ಲ ಪ್ರಯೋಗಗಳಲ್ಲೂ ವ್ಯಕ್ತಿಯ ಅಥವಾ ಸಮುದಾಯದ ಅಥವಾ ರಾಜ್ಯದ ಪ್ರಯತ್ನಗಳಿಗಷ್ಟೇ ಮಹತ್ವ ನೀಡ ಲಾಗಿದ್ದು, ಸಮುದಾಯವೆಂದು ಪರಿಗಣಿಸಲಾಗುವ ಜನತೆಯ ಒಟ್ಟು ಪ್ರಯತ್ನಕ್ಕಲ್ಲ. ಈ ಕಾರಣದಿಂದಾಗಿ, ಖಾಸಗಿ ಸಹಕಾರಿ ಹಾಗೂ ಸಾರ್ವಜನಿಕ ವಲಯಗಳೆಲ್ಲವೂ ಸರ್ವತೋಮುಖ ಅಭಿವೃದ್ಧಿಯ ನಮ್ಮ ಅಂತಿಮ ಗುರಿಗಳನ್ನು ಸಾಧಿಸುವಲ್ಲಿ ವಿಫಲ ವಾಗಿವೆ. ಅಭಿವೃದ್ಧಿಯ ಪ್ರಯೋಜನಗಳು ಅಥವಾ ಲಾಭಗಳು ಕೆಲವು ವರ್ಗಗಳ ಜನತೆಗೆ ಮಾತ್ರವೇ ಮುಟ್ಟಿವೆ. ಈಗಾಗಲೇ ಪ್ರಯೋಜನ ಪಡೆದವರು ತಾವು ಮಾತ್ರ ಹೆಚ್ಚಿನ ಪ್ರಯೋಜನಗಳನ್ನು ಪಡೆಯಲು ಕೂಗಾಡುತ್ತಿರುವ ಹಾಗೂ ಆ ಕಾರ್ಯದಲ್ಲಿ ಯಶಸ್ವಿಯಾಗುತ್ತಿರುವ ಅಹಿತಕರ ಪ್ರವೃತ್ತಿಯನ್ನು ನಾವು ನೋಡು ತ್ತಿದ್ದೇವೆ. ಈಗಾಗಲೇ ಲಾಭದಾಯಕವಾದ ಉದ್ಯೋಗಗಳಲ್ಲಿರುವವರು ಅಧಿಕ ವೇತನಗಳನ್ನು ಕೋರುತ್ತಿದ್ದಾರೆ ಮತ್ತು ಆಗಾಗ ನಿರುದ್ಯೋಗಿಗಳು ಮತ್ತು ಉದ್ಯೋಗರಹಿತ ಜನರನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಅವರ ಹಿತಾಸಕ್ತಿಗಳಿಗೆ ಹಾನಿಯುಂಟು ಮಾಡಿ ಅವುಗಳನ್ನು ಪಡೆಯುತ್ತಾರೆ. ಇದೇ ರೀತಿ, ನೀರಾವರಿ ಅಥವಾ ಇತರ ಅಭಿವೃದ್ಧಿಪರ ಚಟುವಟಿಕೆಗಳಿಂದ ಸೌಲಭ್ಯ ದೊರೆತಿರುವ ಜನರು ಬಹುಕಾಲದಿಂದ ಕ್ಷಾಮ ಪರಿಸ್ಥಿತಿ ಇರುವ ಪ್ರದೇಶದಲ್ಲಿ ವಾಸಿಸುವ ಜನರನ್ನು ಸಂಪೂರ್ಣ ಕಡೆಗಣಿಸಿ ಇನ್ನೂ ಹೆಚ್ಚಿನ ಪರಿಹಾರಗಳನ್ನು ಕೋರುತ್ತಿದ್ದಾರೆ.

17. ಆರ್ಥಿಕ ಅಭಿವೃದ್ಧಿಯ ಇಡೀ ವಿಧಾನದಲ್ಲಿ ನಾವು ಜನತಾ ವಲಯ ವನ್ನು ಮರೆತಿದ್ದೇವೆ. ಭವಿಷ್ಯದಲ್ಲಾದರೂ, ಜನತಾವಲಯದತ್ತ ನಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಇದುವರೆಗೆ ಪ್ರಯೋಜನ ಪಡೆಯದವರು ಮತ್ತು ಅಭಿವೃದ್ಧಿ ಪರ ವಿಧಾನದ ಸೌಲಭ್ಯಗಳಿಂದ ಇದುವರೆಗೆ ವಂಚಿತರಾದವರ ಕಡೆಗೆ ಸಂಪೂರ್ಣ ಗಮನಕೊಡುವುದು ನಮ್ಮ ಏಳನೇ ಯೋಜನೆಯ ಉದ್ದೇಶ. ಪ್ರಜೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಒಳಗೊಳ್ಳುವಂತೆ ಮಾಡುವುದರಿಂದ ಅದರ ಪ್ರಯೋಜನಗಳು ಸಮಾಜದ ಎಲ್ಲ ವರ್ಗಗಳವರಿಗೂ ಮುಟ್ಟುತ್ತದೆಂದು ನನ್ನ ಅಭಿಪ್ರಾಯ. ಅವರ ಜೀವನದ ಎಲ್ಲ ಕ್ಷೇತ್ರಗಳ ಅಭಿವೃದ್ಧಿಯೇ ನಾವು ಸಾಧಿಸಬಯಸುವ ಅಭಿವೃದ್ಧಿ. ನಮ್ಮ ರಾಜ್ಯದಲ್ಲಿ ಈ ಸಂಬಂಧದಲ್ಲಿ ಈ ಕೆಳಗೆ ಕೊಟ್ಟಿರುವಂಥ ಅವಶ್ಯಕ ಕ್ರಮಗಳನ್ನು ಈಗಾಗಲೇ ನಾವು ಪ್ರಾರಂಭಿಸಿದ್ದೇವೆ.

(I) ಖುಷ್ಕಿ ಭೂಮಿ ಅಭಿವೃದ್ಧಿ ಯೋಜನೆ, ಉದ್ಯೋಗ ಖಾತರಿ ಯೋಜನೆ, ಜನತೆಯ ಬಡವರ್ಗಗಳಿಗೆ ಕಿಲೋ ಒಂದಕ್ಕೆ 2 ರೂಪಾಯಿಯಂತೆ ಅಕ್ಕಿ ಸರಬರಾಜು, ಇಳಿಸಿದ ದರಗಳಲ್ಲಿ ಸೀರೆ ಮತ್ತು ಧೋತಿಗಳ ಸರಬರಾಜು, ವಿದ್ಯಾರ್ಥಿಗಳಿಗೆ ಪುಸ್ತಕಗಳು ಮತ್ತು ಸಮವಸ್ತ್ರಗಳ ಉಚಿತ ಸರಬರಾಜು, ವಿಧವಾ ವೇತನಗಳು ಇತ್ಯಾದಿ–ಇವುಗಳು ಈ ವರ್ಗದವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಗುರಿ ಹೊಂದಿವೆ.

II) ನಮ್ಮಲ್ಲಿ ಪ್ರತಿಯೊಬ್ಬರೂ ಅಕ್ಷರಸ್ಥರಾಗುವಂತೆ ಮಾಡುವ ಅಕ್ಷರ ಸೇನೆ ಕಾರ್ಯಕ್ರಮ ಅವರ ಮನೋಶಕ್ತಿಯನ್ನು ಸುಧಾರಿಸುವ ಗುರಿ ಹೊಂದಿದೆ.

III) ಸರ್ಕಾರದ ಘಟಕಗಳನ್ನು ಜನರ ಬಳಿಗೊಯ್ಯುವ ಉದ್ದೇಶಕ್ಕಾಗಿ ಅವಶ್ಯ ಅಧಿಕಾರ ಹಾಗೂ ಸಂಪನ್ಮೂಲಗಳನ್ನು ನೀಡಿ ಜಿಲ್ಲಾ ಪರಿಷತ್‌ಗಳನ್ನು, ಮಂಡಲ ಪಂಚಾಯತ್‌ಗಳನ್ನು ರಚನೆ ಮಾಡುವುದು ರಾಜಕೀಯ ಅಧಿಕಾರವನ್ನು ಪ್ರಜಾಸತ್ತಾತ್ಮಕವಾಗಿ ವಿಕೇಂದ್ರೀಕರಿಸುವ ಈ ಸಂಪೂರ್ಣ ವಿಧಾನವು. ಅಧಿಕಾರವನ್ನು ಸಮಾನವಾಗಿ ಹಂಚಿಕೊಳ್ಳುವ ಸಹಭಾಗಿ ಪ್ರಜಾಪ್ರಭುತ್ವವನ್ನು ರಚಿಸುವ ಗುರಿ ಹೊಂದಿದೆ.

18. ಆದ್ದರಿಂದ ಏಳನೇ ಯೋಜನೆಯ ಅವಧಿಯಲ್ಲಿ ಕರ್ನಾಟಕದ ಅಭಿವೃದ್ಧಿ ಯೋಜನಾ ವಿಧಾನಗಳಲ್ಲಿ ಜನತಾ ವಲಯದ ಪಾತ್ರ ಮಹತ್ವದ್ದಾಗಲಿದೆ.

ರಾಷ್ಟ್ರೀಯ ಪ್ರಯತ್ನದ ಆವಶ್ಯಕತೆ

19. ಲೋಕಸಭೆ ಮತ್ತು ವಿಧಾನಸಭೆಗೆ ನಡೆದ ಇತ್ತೀಚಿನ ಚುನಾವಣೆಗಳಲ್ಲಿ ಜನರು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ದೃಢ ಸರ್ಕಾರಗಳನ್ನು ಆರಿಸಿದ್ದಾರೆ. ಆಯಾ ಪಕ್ಷಗಳಿಗೆ ಪ್ರಚಂಡ ಬಹುಮತ ನೀಡಿದ್ದಾರೆ. ಹೀಗಾಗಿ ಸರ್ಕಾರಗಳು ಮುಂದಿನ 5 ವರ್ಷಗಳಲ್ಲಿ ರಾಜಕೀಯ ಸ್ಥಿರ ವಾತಾವರಣದಲ್ಲಿ ತಮ್ಮದೇ ಆದ ಕಾರ್ಯಕ್ರಮಗಳನ್ನು ಜಾರಿಗೆ ತರುವ ಅವಕಾಶಗಳನ್ನು ಹೊಂದಿವೆ.

20. ನನ್ನ ಅಭಿಪ್ರಾಯದಲ್ಲಿ, ನಮ್ಮ ರಾಷ್ಟ್ರದ ಅರ್ಥ ವ್ಯವಸ್ಥೆಯು ವಿಭಜನೀಯವಲ್ಲ. ಅಭಿವೃದ್ಧಿಯೂ ಅಷ್ಟೇ. ಯಾವಾಗಲೂ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಾಗೂ ರಾಜ್ಯಗಳೊಳಗೆ ಪರಸ್ಪರ ಸಮಂಜಸ ಸಾಮರಸ್ಯ ಮತ್ತು ಸಮನ್ವಯವಿರಬೇಕು. ಮೂಲ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಯಾವುದೇ ಘರ್ಷಣೆಯಿರತಕ್ಕದ್ದಲ್ಲ. ಮೂಲಭೂತ ಉದ್ದೇಶಗಳ ಈಡೇರಿಕೆಯನ್ನು ರಾಷ್ಟ್ರೀಯ ಪ್ರಯತ್ನದಿಂದ ಮಾತ್ರ ಸಾಧಿಸಬಹುದು. ಪ್ರಮುಖ ವಿವಾದಾಂಶಗಳ ಬಗ್ಗೆ ರಾಷ್ಟ್ರೀಯ ಸಹಕಾರವನ್ನು ರೂಪಿಸುವುದರಿಂದ ಮಾತ್ರ ಇದು ಸಾಧ್ಯ. ಈ ವಿಷಯದಲ್ಲಿ ಕರ್ನಾಟಕ ಸರ್ಕಾರದ ಸಂಪೂರ್ಣ ಸಹಕಾರ ಇರುವುದೆಂದು ನಾನು ಪ್ರಧಾನ ಮಂತ್ರಿಗಳಿಗೆ ಆಶ್ವಾಸನೆ ನೀಡುತ್ತೇನೆ.

ದುಡಿಮೆಯ ಹಕ್ಕು

21. ಜನತೆಗೆ ವಚನವಿತ್ತಂತೆ ನಿರುದ್ಯೋಗ ನಿವಾರಣೆಗೆ ಆದ್ಯತೆ ನೀಡುವುದು ನಮ್ಮ ಕರ್ತವ್ಯ. ನಿರುದ್ಯೋಗ ನಿವಾರಣೆಯಾಗದೆ ಬಡತನವನ್ನು ನಿರ್ಮೂಲಗೊಳಿಸುವುದು ಸಾಧ್ಯವಿಲ್ಲ. ಕೆಲಸದ ಹಕ್ಕು ನಮ್ಮ ಮೂಲಭೂತ ಹಕ್ಕು ಎಂಬ ಅಂಶವನ್ನು ನಾವು ಒಪ್ಪಲೇಬೇಕು ಮತ್ತು ಅದಕ್ಕೆ ಮನ್ನಣೆ ನೀಡಬೇಕು.

22. ಈ ಸಂದರ್ಭದಲ್ಲಿ ಭಾರತ ಸರ್ಕಾರವು ಇತ್ತೀಚೆಗೆ ಪ್ರಕಟಿಸಿದ ವಸ್ತ್ರೋದ್ಯಮ ನೀತಿಯನ್ನು ಕುರಿತು ನನ್ನ ಆತಂಕವನ್ನು ಸದನದ ಮುಂದೆ ನಾನು ವ್ಯಕ್ತಪಡಿಸಬಯಸುತ್ತೇನೆ. ಈ ನೀತಿಯು ಕೈಮಗ್ಗ ನೇಕಾರರ ಅದರಲ್ಲೂ ದಕ್ಷಿಣದ ನಾಲ್ಕು ರಾಜ್ಯಗಳ ಹಾಗೂ ಬಿಹಾರ ಮತ್ತು ಉತ್ತರ ಪ್ರದೇಶದ ನೇಕಾರರ ಹಿತಾಸಕ್ತಿಗೆ ಅತೀವ ಹಾನಿಯುಂಟು ಮಾಡಿದೆ. ಕೃಷಿಯನ್ನು ಬಿಟ್ಟರೆ, ಕೈಮಗ್ಗದ ಉದ್ಯಮ ಹೆಚ್ಚು ಸಂಖ್ಯೆಯ ಜನತೆಗೆ ಉದ್ಯೋಗ ನೀಡುತ್ತದೆ. ಮೊದಲಿನಿಂದಲೂ ಕೈಮಗ್ಗ ನೇಕಾರರು ನಾನಾ ತರಹದ ದುರ್ವ್ಯವಹಾರಗಳಿಗೆ ಗುರಿಯಾಗಿದ್ದಾರೆ ಮತ್ತು ವ್ಯವಸ್ಥಿತ ಮಿಲ್ಲುಗಳಿಂದ ಅಸಮಾನ ಪೈಪೋಟಿಯನ್ನು ಎದುರಿಸುತ್ತಿದ್ದಾರೆ. ಮ್ಯಾಂಚೆಸ್ಟರನ ಗಿರಣಿ ಉತ್ಪನ್ನಗಳೊಂದಿಗೆ ನಮ್ಮ ದೇಶದ ಕೈಮಗ್ಗಗಳು ಯಶಸ್ವಿಯಾಗಿ ಸ್ಪರ್ಧಿಸಿದ್ದ ಸಮಯ ಒಂದಿತ್ತು. ಆಗ ಬ್ರಿಟಿಷ್ ದೊರೆಗಳು ನಮ್ಮ ಕೈಮಗ್ಗ ನೇಕಾರರನ್ನು ಶಕ್ತಿಗುಂದಿಸಿ ನಮ್ಮ ಕೈಮಗ್ಗ ಕೈಗಾರಿಕೆಯನ್ನು ನಾಶಪಡಿಸಿದ್ದುವು. ನಮ್ಮ ಕೈಮಗ್ಗದ ಉತ್ಪನ್ನಗಳು ವಿದೇಶೀ ವಿನಿಮಯ ಗಳಿಕೆಯಲ್ಲಿ ಪ್ರಮುಖವಾಗಿದ್ದುವು. ಮೂರು ದಶಕಗಳ ಹಿಂದೆ ಭಾರತ ಸರ್ಕಾರವು ಗಿರಣಿಗಳಿಗೆ ಅನುಕೂಲಕರವಾದ ಕಾರ್ಯ ನೀತಿ ನಿರ್ಣಯವೊಂದನ್ನು ತೆಗೆದುಕೊಂಡಾಗ ಹಿಂದಿನ ಮದರಾಸು ಪ್ರಾಂತದ ಮುಖ್ಯ ಮಂತ್ರಿಯಾಗಿದ್ದ ಶ್ರೀ ರಾಜಾಜಿಯವರು ಈ ಕಾರ್ಯನೀತಿಯನ್ನು ಅನುಷ್ಠಾನಕ್ಕೆ ತಂದಿದ್ದರೆ, ತನ್ನ ಪ್ರಾಂತ್ಯದಲ್ಲಿ ಲಕ್ಷಾಂತರ ಕೈಮಗ್ಗ ನೇಕಾರರು ಉದ್ಯೋಗಹೀನರಾಗುತ್ತಾರೆ ಮತ್ತು ಅವರನ್ನು ಮುಂದಿನ ರೈಲಿನಲ್ಲಿ ದೆಹಲಿಗೆ ಕಳುಹಿಸಿಕೊಡುತ್ತೇನೆ ಎಂದು ಅಂದಿನ ಪ್ರಧಾನ ಮಂತ್ರಿ ಪಂಡಿತ್ ನೆಹರೂ ಅವರಿಗೆ ತಿಳಿಸಿದ್ದರು ಎಂಬುದನ್ನು ನಾನು ಸದನದ ನೆನಪಿಗೆ ತರಬಯಸುತ್ತೇನೆ. ಆ ತರುವಾಯ ಪಂಡಿತ್ ನೆಹರೂರವರು ತಮ್ಮ ವಿಚಾರವನ್ನು ಬದಲಿಸಿದರು. ಈ ಹೊಸ ಕಾರ್ಯನೀತಿಯನ್ನು ಕಾರ್ಯಗತಗೊಳಿಸಿದರೆ ಐದು ವರ್ಷಗಳ ಅವಧಿಯಲ್ಲಿ ಒಂದು ದಶಲಕ್ಷಕ್ಕೂ ಹೆಚ್ಚು ಕೈಮಗ್ಗ ನೇಕಾರರು ನಿರುದ್ಯೋಗಿಗಳಾಗುವುದು ಖಂಡಿತ ಎಂದು ನಾನು ಎಚ್ಚರಿಸಬಯಸುತ್ತೇನೆ.

23. ನಮ್ಮ ರಾಜ್ಯದಲ್ಲಿ ಕೈಮಗ್ಗದ ಉದ್ಯಮವನ್ನು ಮತ್ತಷ್ಟು ಸಂರಕ್ಷಿಸಲು ಹಾಗೂ ಅದಕ್ಕೆ ಉತ್ತೇಜನ ನೀಡಲು, ಜನತೆಯ ಬಡವರ್ಗದವರಿಗೆ ಸೀರೆ ಮತ್ತು ಧೋತಿಗಳನ್ನು ಹಂಚುವುದಕ್ಕಾಗಿ ಬೇಕಾಗುವ ಬಟ್ಟೆಯನ್ನು ಕೈಮಗ್ಗದ ನೇಕಾರರಿಂದ ಪಡೆಯಲು ನಾವು ನಿರ್ಧರಿಸಿದ್ದೇವೆ. ಹೀಗೆ ಮಾಡುವುದರಿಂದ ರಾಜ್ಯದಲ್ಲಿ ಇನ್ನೂ ಒಂದು ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಹೆಚ್ಚು ಹೆಚ್ಚು

ಉದ್ಯೋಗಾವಕಾಶವನ್ನು ಕಲ್ಪಿಸುವುದಕ್ಕೆ ನಮ್ಮ ಸರ್ಕಾರ ಹೆಚ್ಚು ಮಹತ್ವ ನೀಡಿದೆ. ನಮ್ಮ ಹೊಸ ಔದ್ಯಮಿಕ ನೀತಿಯು ಉದ್ಯೋಗಪರ ನೀತಿಯಾಗಿದೆ. ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಚಿಕ್ಕ ಉದ್ಯಮಗಳ ಅಭಿವೃದ್ಧಿಗೆ ಹಾಗೂ ಉದ್ಯಮಶೀಲತೆಯ ವಿಕೇಂದ್ರೀಕರಣಕ್ಕೆ ನಾವು ಹೆಚ್ಚು ಪ್ರಾಧಾನ್ಯ ನೀಡಿದ್ದೇವೆ. ಪ್ರತಿ ತಾಲ್ಲೂಕು ಕೇಂದ್ರವೂ ಬೆಳವಣಿಗೆಯ ಕೇಂದ್ರವಾಗಲಿದೆ. ಖುಷ್ಕಿ ಭೂಮಿಯನ್ನು ಅಭಿವೃದ್ಧಿಗೊಳಿಸುವ ಮಹತ್ವಾಕಾಂಕ್ಷೆಯ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವುದೇ ಈ ಎಲ್ಲ ಯತ್ನಗಳ ಉದ್ದೇಶವಾಗಿದೆ.

24. ಕೃಷಿ ಕಾರ್ಮಿಕರಿಗೆ ಅದರಲ್ಲೂ ಮುಖ್ಯವಾಗಿ ಬಿಹಾರ ಮತ್ತು ಉತ್ತರ ಪ್ರದೇಶದ ಕೃಷಿ ಕಾರ್ಮಿಕರಿಗೆ ಅಧಿಕ ಪ್ರಮಾಣದಲ್ಲಿ ನಿರುದ್ಯೋಗವನ್ನುಂಟು ಮಾಡಲು ಕಾರಣವಾಗುವ ಕೊಯ್ಲಿ ಯಂತ್ರಗಳ (ಹಾರ್ವೆಸ್ಟರ್ ಕಂಬೈನುಗಳ) ತಯಾರಿಕೆಗೆ ಲೈಸೆನ್ಸು ಕೊಡಲು ಕೇಂದ್ರ ಸರ್ಕಾರವು ನಿರ್ಣಯ ಕೈಕೊಂಡಿರುವ ಬಗ್ಗೆ ಬಂದಿರುವ ವರದಿ ನಿಜಕ್ಕೂ ಕಳವಳ ಉಂಟುಮಾಡುವ ವಿಚಾರವಾಗಿದೆ.

25. ಈ ವಿಷಯಗಳು ರಾಷ್ಟ್ರೀಯ ಮಹತ್ವವುಳ್ಳವಾದ್ದರಿಂದ, ನಿರ್ಣಯಗಳನ್ನು ಕೈಗೊಳ್ಳುವ ಮೊದಲು ಈ ವಿಷಯಗಳ ಬಗ್ಗೆ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನಲ್ಲಿ ಚರ್ಚೆ ನಡೆಸಬೇಕಾಗಿತ್ತು.

ಕಾರ್ಯನಿರ್ವಹಣೆಯ ಸಮೀಕ್ಷೆ

26. ಪ್ರತಿಯೊಂದು ವಲಯದ ಕಾರ್ಯಕ್ರಮಗಳನ್ನು ಪುನರವಲೋಕಿಸುವುದರಲ್ಲೇ ಸದನದ ಹೆಚ್ಚಿನ ಸಮಯವನ್ನು ನಾನು ತೆಗೆದುಕೊಳ್ಳಬಯಸುವುದಿಲ್ಲ. ಪ್ರತಿಯೊಂದು ಇಲಾಖೆಯ ಕಾರ್ಯನಿರ್ವಹಣೆಯ ಒಂದು ಸಮೀಕ್ಷೆಯನ್ನು ಸದಸ್ಯರಿಗೆ ತರುವಾಯ ಕಳುಹಿಸಿಕೊಡಲಾಗುವುದು.

27. ಕೇಂದ್ರ ಸರ್ಕಾರವು ಖುಷ್ಕಿ ಭೂಮಿ ಅಭಿವೃದ್ಧಿಯ ಉದ್ದೇಶ ಮತ್ತು ವಿಚಾರವನ್ನು ಶ್ಲಾಘಿಸಿರುವುದಷ್ಟೇ ಅಲ್ಲ. ಆ ಬಗ್ಗೆ ಒಂದು ರಾಷ್ಟ್ರೀಯ ಕಾರ್ಯಕ್ರಮವನ್ನೂ ಅಳವಡಿಸಿಕೊಂಡು ಬಂಜರು ಭೂಮಿ ಅಭಿವೃದ್ಧಿ ಮತ್ತು ಭೂಬಳಕೆಯ ಮಂಡಲಿಗಳನ್ನು ರಚಿಸಿದೆ ಎಂಬ ಅಂಶವನ್ನು ಸದನಕ್ಕೆ ತಿಳಿಸಲು ನನಗೆ ಹರ್ಷವೆನಿಸುತ್ತದೆ. ಈ ಕಾರ್ಯಕ್ರಮಗಳ ಬಗ್ಗೆ ಇಟ್ಟುಕೊಂಡಿರುವ ಗುರಿಯನ್ನು ನಾವು ಸಾಧಿಸುವೆವೆಂಬ ಭರವಸೆ ನಮಗಿದೆ.

ವನನಿರ್ಮಾಣ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ

28. ಜೀವಿ ಪರಿಸರ ಸಮತೋಲನವನ್ನು ಪೂರ್ವಸ್ಥಿತಿಗೆ ತರುವುದು ನಮ್ಮ ಸರ್ಕಾರದ ಪ್ರಥಮ ಗುರಿ. ಅನೇಕ ವರ್ಷಗಳಿಂದ ಅರಣ್ಯಗಳನ್ನು ಸ್ವಾರ್ಥಕ್ಕಾಗಿ ಬೃಹತ್ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದ್ದು ಅದನ್ನು ಅಗತ್ಯವಿರುವ ಸಮಸ್ಥಿತಿಗೆ ತರಲು ಕಾಲಾವಕಾಶ ಬೇಕಾಗುತ್ತದೆ. ಈ ಸಮಸ್ಥಿತಿಯನ್ನು ಆದಷ್ಟು ತ್ವರಿತವಾಗಿ ಸಾಧಿಸುವ ಸಲುವಾಗಿ ನಾವು 'ಸಿ' ಮತ್ತು 'ಡಿ' ವರ್ಗದ ಸರ್ಕಾರಿ ಜಮೀನುಗಳನ್ನು

ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ನಿರುದ್ಯೋಗಿ ಪದವೀಧರರಿಗೆ ಮತ್ತು ಇತರ ಪದವೀಧರರಿಗೆ ವನನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಸಲುವಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು ಉದ್ದೇಶಿಸಿದ್ದೇವೆ. ಅಧಿಕ ಪ್ರಮಾಣದಲ್ಲಿ ವನನಿರ್ಮಾಣ ಕಾರ್ಯಕ್ರಮವನ್ನು ಕೈಗೊಳ್ಳಲು ಮುಂದೆ ಬರುವ ಯಾವುದೇ ನಿಗಮ ನಿಕಾಯಗಳನ್ನು ಸ್ವಾಗತಿಸುತ್ತದೆ ಮತ್ತು ಅಂಥವುಗಳಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತದೆ. ಎರಡು ವರ್ಷಗಳ ಹಿಂದೆ, ವಿವಿಧ ಪ್ರೋತ್ಸಾಹಕಗಳನ್ನು ನೀಡುವ ಮೂಲಕ ವನನಿರ್ಮಾಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಶೈಕ್ಷಣಿಕ ಮತ್ತು ಇತರ ಸ್ವಯಂಸೇವಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವ ಹೊಸ ಯೋಜನೆಯೊಂದನ್ನು ಸರ್ಕಾರ ಪ್ರಾರಂಭಿಸಿತ್ತು. ಕ್ರಮೇಣ ಇದು ಜನಪ್ರಿಯವಾಗುತ್ತಿದೆ. ಅರಣ್ಯಗಳನ್ನು ಸಂರಕ್ಷಿಸುವ ಮತ್ತು ಬೆಳೆಸುವುದರ ಮುಖ್ಯ ಅವಶ್ಯಕತೆಯ ಬಗ್ಗೆ ಜನರಲ್ಲಿ ನಾವು ಅರಿವು ಮೂಡಿಸಬೇಕಾಗಿದೆ ಮತ್ತು ವನನಿರ್ಮಾಣ ಕಾರ್ಯಕ್ರಮವನ್ನು ಜನತಾ ಕಾರ್ಯಕ್ರಮವನ್ನಾಗಿಸಬೇಕಾಗಿದೆ. ಈ ಕಾರ್ಯಕ್ರಮಕ್ಕೆ ಜನತೆಯ ಸಂಪೂರ್ಣ ಸಹಕಾರ ದೊರೆಯುತ್ತಿದೆಯೆಂದು ಸದನಕ್ಕೆ ತಿಳಿಸಲು ನನಗೆ ಅತ್ಯಂತ ಸಂತೋಷವೆನಿಸುತ್ತದೆ. 1983-84 ಮತ್ತು 1984-85 ರಲ್ಲಿ ಕ್ರಮವಾಗಿ 22 ಕೋಟಿ ಮತ್ತು 23 ಕೋಟಿ ಮರಗಳನ್ನು ನೆಡಲಾಗಿದೆ ಮತ್ತು ಈ ವರ್ಷ 25 ಕೋಟಿ ಮರಗಳನ್ನು ನೆಡುವ ಕಾರ್ಯಕ್ರಮವಿದೆ.

29. ಬೆಂಗಳೂರು ನಗರ ಮತ್ತು ಕರ್ನಾಟಕದ ಇತರ ಭಾಗಗಳಲ್ಲಿ ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು. ಕೆಲವು ಕನಿಷ್ಠ ಗುಣಮಟ್ಟಗಳನ್ನು ಪಾಲಿಸುವಂತೆ ಮತ್ತು ವಾಹನಗಳಿಂದ ಬರುವ ಹೊಗೆ ಮತ್ತು ಕಾರ್ಬನ್ ಮೊನಾಕ್ಸೈಡಿನ ಪ್ರಮಾಣವು ಗೊತ್ತುಪಡಿಸಿದ ಮಿತಿಯನ್ನು ಮೀರದಂತೆ ನೋಡಿಕೊಳ್ಳಲು ಸಾರಿಗೆ ಇಲಾಖೆಗೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ ಯಥೋಚಿತ ರೀತಿಯಲ್ಲಿ ಮೋಟಾರು ವಾಹನಗಳ ಅಧಿನಿಯಮವನ್ನು ತಿದ್ದುಪಡಿ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿರುವ ವಿವಿಧ ಕಾರ್ಖಾನೆಗಳು ಕೊಳಕು ನೀರನ್ನು ಬಿಡುವುದನ್ನು ಅತಿ ಕಟ್ಟುನಿಟ್ಟಾಗಿ ನಿಯಂತ್ರಿಸಲಾಗುವುದು. ಈ ನಿಯಮಗಳನ್ನು ಪಾಲಿಸದಂಥ ಉದ್ಯಮಗಳ ವಿರುದ್ಧ ಉಗ್ರ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ಅಭಿವೃದ್ಧಿ :

30. ಸಂಪನ್ಮೂಲ ನಿರ್ಬಂಧಗಳು ನಮ್ಮ ರಾಜ್ಯವೊಂದಕ್ಕೆ ಸೀಮಿತವಾಗಿರದಿದ್ದರೂ, ಅವುಗಳಿಂದಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕಳೆದ ವರ್ಷದ ಬಜೆಟ್‌ನಲ್ಲಿ ಮಾಡಿದ ಏರ್ಪಾಡಿಗಿಂತ ಹೆಚ್ಚು ಬಜೆಟ್ ಹಂಚಿಕೆ ಮಾಡಲು ಸಾಧ್ಯವಾಗದಿದ್ದುದಕ್ಕೆ ನಾನು ವಿಷಾದಿಸುತ್ತೇನೆ. ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿದಾಗ, ವಿಶೇಷವಾಗಿ ಪ್ರಮುಖ ವಲಯಗಳಲ್ಲಿ ಈ ಬಜೆಟ್ ಏರ್ಪಾಡುಗಳನ್ನು ಹೆಚ್ಚಿಸಲು ನಾನು ಸಿದ್ಧನಿದ್ದೇನೆ.

ನೀರಾವರಿ

31. ಕಳೆದ ಎರಡು ವರ್ಷಗಳಲ್ಲಿ ನಮ್ಮ ನೀರಾವರಿ ವಲಯದಲ್ಲಿನ ಸಾಧನೆ ಅದಕ್ಕೆ ಹಿಂದಿನ ಮೂರು ವರ್ಷಗಳಿಗಿಂತ ಬಹಳಷ್ಟು ಹೆಚ್ಚು. ಮುಂದುವರೆಯುತ್ತಿರುವ ಯೋಜನೆಗಳನ್ನು ಪೂರ್ಣಗೊಳಿಸುವುದು ಮತ್ತು ಈಗಾಗಲೇ ಪೂರ್ಣಗೊಂಡ ಯೋಜನೆಗಳ ಪ್ರಯೋಜನವನ್ನು ಕ್ರೋಢೀಕರಿಸುವುದು ನಮ್ಮ ಪ್ರಪ್ರಥಮ ಕಾಳಜಿಯಾಗಿದೆ. 1985-86ರಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳ ಅಡಿಯಲ್ಲಿ ಒಂದು ಲಕ್ಷ ಹೆಕ್ಟೇರುಗಳು ಮತ್ತು ಸಣ್ಣ ನೀರಾವರಿಯ ಯೋಜನೆಯ ಅಡಿಯಲ್ಲಿ 13,000 ಹೆಕ್ಟೇರುಗಳ ಹೊಸ ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸಲು ಉದ್ದೇಶಿಸಲಾಗಿದೆ ಹಾಗೂ ಆ ಬಗ್ಗೆ ಕ್ರಮವಾಗಿ 163.18 ಕೋಟಿ ರೂಪಾಯಿ ಹಾಗೂ 26.29 ಕೋಟಿ ರೂಪಾಯಿ ವೆಚ್ಚಕ್ಕೆ ಏರ್ಪಾಡು ಮಾಡಲಾಗಿದೆ.

32. ಆರನೇ ಯೋಜನಾವಧಿಯಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳಿಗಾಗಿ ಪ್ರಸ್ತಾವಿಸಲಾಗಿದ್ದ 577.15 ಕೋಟಿ ರೂಪಾಯಿ ಹಾಗೂ ಸಣ್ಣ ನೀರಾವರಿಗಾಗಿ ಪ್ರಸ್ತಾವಿಸಲಾಗಿದ್ದ 100 ಕೋಟಿ ರೂಪಾಯಿ ವೆಚ್ಚಕ್ಕೆ ಪ್ರತಿಯಾಗಿ ಕ್ರಮವಾಗಿ 583 ಕೋಟಿ ರೂಪಾಯಿ ಹಾಗೂ 94.24 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಆರನೇ ಯೋಜನಾವಧಿಯಲ್ಲಿ 2.42 ಲಕ್ಷ ಹೆಕ್ಟೇರಗಳ ಹೆಚ್ಚಿನ ನೀರಾವರಿ ಸಾಮರ್ಥ್ಯವನ್ನು ಸೃಜಿಸಲಾಗಿದೆ.

33. ಏಳನೇ ಯೋಜನಾವಧಿಯಲ್ಲಿ 7,38,000 ಹೆಕ್ಟೇರ್ ಭೂಮಿಗೆ ಹೆಚ್ಚಿನ ನೀರಾವರಿ ಸಾಮರ್ಥ್ಯವನ್ನು ಸೃಜಿಸುವುದಕ್ಕಾಗಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ 1000 ಕೋಟಿ ರೂಪಾಯಿಗಳಿಗೂ ಹೆಚ್ಚು ಮತ್ತು ಸಣ್ಣ ನೀರಾವರಿ ಯೋಜನೆಗಾಗಿ 180 ಕೋಟಿ ರೂಪಾಯಿಗಳಿಗೂ ಹೆಚ್ಚು ವೆಚ್ಚ ಮಾಡಲು ಉದ್ದೇಶಿಸಲಾಗಿದೆ. ಸಂಪನ್ಮೂಲಗಳ ಸ್ಥಿತಿ ಸಂಧಾರಿಸಿದಾಗ, ನದಿ ನೀರಿನ ನಮ್ಮ ಪೂರ್ಣ ಪಾಲನ್ನು ಬಳಸಿಕೊಳ್ಳಲು ಸಾಧ್ಯವಾಗುವಂತೆ ಏಳನೇ ಯೋಜನೆಯಲ್ಲಿ ಈ ವಲಯಕ್ಕಾಗಿ ನಾವು ಹೆಚ್ಚಿನ ವೆಚ್ಚಕ್ಕೆ ಹಣ ಒದಗಿಸುತ್ತೇವೆ.

34. ಹಿಪ್ಪರಗಿ ಅಣೆಕಟ್ಟು, ರಾಮತಾಲ್ ಮುಂತಾದ ಕೆಲವೊಂದು ಹೊಸ ನೀರಾವರಿ ಯೋಜನೆಗಳಿಗೆ ಬಜೆಟಿನಲ್ಲಿ ಸಾಂಕೇತಿಕವಾಗಿ ಹಣದ ಏರ್ಪಾಡುಗಳನ್ನು ಮಾಡಿದ್ದೇನೆ ಮತ್ತು ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆಯ ಕೇಂದ್ರ ಮಂತ್ರಿಯವರು ಭದ್ರಾ ಮೇಲ್ದಂಡೆ, ತುಂಗಾ ಮೇಲ್ದಂಡೆ, ಭೀಮಾ ಪ್ರವಾಹ ಯೋಜನೆ, ಭೀಮಾ ಏತ ನೀರಾವರಿ ಯೋಜನೆ ಮತ್ತು ದೂದ್‌ಗಂಗಾ ಯೋಜನೆಗಳಂಥ ಇತರ ಬೃಹತ್ ಯೋಜನೆಗಳನ್ನು ಏಳನೇ ಯೋಜನೆಯಲ್ಲಿ ಸೇರಿಸಿದ ಪಕ್ಷದಲ್ಲಿ ಅವುಗಳಿಗೆ ವಿದೇಶಿ ನೆರವನ್ನು ದೊರಕಿಸಿ ಕೊಡಲು ಸಾಧ್ಯವಾಗುವುದೆಂದು ನೀಡಿದ ಭರವಸೆಯ ಮೇರೆಗೆ ಅಂಥ ಕೆಲವು ಇತರ ಯೋಜನೆಗಳನ್ನು ಸೇರಿಸಿದ್ದೇನೆ. ನಾವು ಅವರಿಗೆ ಕೃತಜ್ಞರಾಗಿದ್ದೇವೆ.

ವಿದ್ಯುತ್

35. ರಾಯಚೂರು ಶಾಖೋತ್ಪನ್ನ ವಿದ್ಯುಚ್ಛಕ್ತಿ ಯೋಜನೆ ಹಾಗೂ ಕಾಳಿ ಮತ್ತು ಚಕ್ರಾ ಯೋಜನೆಗಳ ವಿದ್ಯುಚ್ಛಕ್ತಿ ವಲಯದಲ್ಲಿ ಹಿಂದೆ

ಆದುದಕ್ಕಿಂತಲೂ ಹೆಚ್ಚಿನ ಕೆಲಸವನ್ನು ಕಳೆದ ಎರಡು ವರ್ಷಗಳಲ್ಲಿ ನಿರ್ವಹಿಸಲಾಗಿದೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಯೋಜನೆಯ ಮೊದಲನೇ ಘಟಕ – ಹಂತ I ಮುಂದಿನ ತಿಂಗಳ ವೇಳೆಗೆ ಪೂರ್ಣ ವಿದ್ಯುಚ್ಛಕ್ತಿಯ ಸರಬರಾಜನ್ನು ಮಾಡಲು ಆರಂಭಿಸುವುದು. ಎರಡನೇ ಘಟಕವು 1985ರ ಡಿಸೆಂಬರ್ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಸೂಪಾ ಅಣೆಕಟ್ಟು ವಿದ್ಯುಚ್ಛಕ್ತಿ ಕೇಂದ್ರದಲ್ಲಿ ತಲಾ 50 ಮೆಗಾವ್ಯಾಟಿನ ಎರಡು ಹೆಚ್ಚಿನ ಘಟಕಗಳು 1985-86ರಲ್ಲಿ ಕಾರ್ಯಾರಂಭ ಮಾಡಲಿವೆ. ಈ ಸಾಧನೆಯ ಪರಿಣಾಮವಾಗಿ ವಿದ್ಯುತ್ತಿನ ಲಭ್ಯತೆಯು 1984-85ರಲ್ಲಿ ಉತ್ಪಾದಿಸಲಾದ 8030 ದಶಲಕ್ಷ ಯೂನಿಟ್ಟುಗಳಿಗಿಂತ 1.54 ದಶಲಕ್ಷ ಯೂನಿಟ್ಟುಗಳಷ್ಟು ಹೆಚ್ಚುತ್ತದೆ. ಇದು ಸುಮಾರು ಶೇಕಡ 16ರಷ್ಟು ಹೆಚ್ಚಳವನ್ನು ತೋರಿಸುತ್ತದೆ. ಈ ಎಲ್ಲವೂ ಕಾರ್ಯಸಾಧ್ಯವಾಗುವಂತೆ ಶ್ರಮಿಸಿದ ಎಲ್ಲಾ ಅಧಿಕಾರಿಗಳನ್ನು ಮತ್ತು ಕೆಲಸಗಾರರನ್ನು ನಾನು ಶ್ಲಾಘಿಸುತ್ತೇನೆ. ಈ ಸಾಧನೆಯ ಬಗ್ಗೆ ನಾವು ಹೆಮ್ಮೆಪಡುತ್ತೇವೆ.

36. ವಿದ್ಯುತ್ ಉತ್ಪಾದನೆಗಾಗಿ ಆರನೇ ಯೋಜನೆಯಲ್ಲಿ ಒದಗಿಸಿದ 408.90 ಕೋಟಿ ರೂಪಾಯಿಗೆ ಪ್ರತಿಯಾಗಿ ಈಗಾಗಲೇ 494.45 ಕೋಟಿ ರೂಪಾಯಿ ವೆಚ್ಚ ಮಾಡಿದ್ದೇವೆ. ಏಳನೇ ಯೋಜನೆಯಲ್ಲಿ ವಿದ್ಯುತ್ ಉತ್ಪಾದನೆಗೆ ಪ್ರಸ್ತಾವಿಸಲಾದ ಒಟ್ಟು ವೆಚ್ಚ 802 ಕೋಟಿ ರೂಪಾಯಿ.

37. ಕರ್ನಾಟಕ ವಿದ್ಯುತ್ ಮಂಡಲಿಯು ಕೈಗಾರಿಕೋದ್ಯಮಿಗಳ ಹಣಕಾಸು ಬೆಂಬಲ ಮತ್ತು ಸಹಕಾರದೊಂದಿಗೆ ಯಲಹಂಕದಲ್ಲಿ ಡೀಸಲ್ ಆಧಾರಿತ ವಿದ್ಯುತ್ ಯೋಜನೆಯೊಂದನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಉತ್ಪಾದಿಸಿದ ಹೆಚ್ಚಿನ ವಿದ್ಯುತ್ತನ್ನು ಈ ಯೋಜನೆಯನ್ನು ಬೆಂಬಲಿಸುವಂಥವರ ಪ್ರಯೋಜನಕ್ಕಾಗಿ ಬಳಸಲಾಗುವುದು.

38. ಕನಕಪುರ, ಪೀಣ್ಯ, ಜಮಖಂಡಿ, ಕೋಲಾರ, ಬೀದರ್ ಮತ್ತು ಇಂಡಿಗಳಲ್ಲಿ ವಿದ್ಯುತ್ ಸರಬರಾಜಿನ ಏರುಪೇರುಗಳ ಕಾರಣದಿಂದಾಗಿ ರೈತರು, ಕುಶಲಕರ್ಮಿಗಳು ಮತ್ತು ಸಣ್ಣಪ್ರಮಾಣದ ಉದ್ಯಮಗಾರರು ಅಪಾರ ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ ಅಲ್ಲಿನ ವಿದ್ಯುತ್ ಪರಿಸ್ಥಿತಿಯನ್ನು ಸ್ಥಿರಪಡಿಸಲು ಅವುಗಳಿಗೆ ಹತ್ತಿರದ ಸ್ಥಳದಲ್ಲಿ ನಿರ್ಬಂಧಿತ ವಿದ್ಯುತ್ ಜನಕಗಳನ್ನು ಕರ್ನಾಟಕ ವಿದ್ಯುತ್ ನಿಗಮವು ಸ್ಥಾಪಿಸುವುದು.

39. ಕರ್ನಾಟಕದ ಪ್ರಸಕ್ತ ವರ್ಷದ ವಿದ್ಯುತ್ ಅಗತ್ಯತೆ 14,000 ದಶಲಕ್ಷ ಯೂನಿಟ್‌ಗಳು. ವಿದ್ಯುತ್ ಆಮದೂ ಸೇರಿದಂತೆ ನಮಗೆ ದೊರೆಯುತ್ತಿರುವ ವಿದ್ಯುತ್ ಕೇವಲ ಸುಮಾರು 12,000 ದಶಲಕ್ಷ ಯೂನಿಟುಗಳು. ಈವರೆಗೆ, ವಿದ್ಯುತ್ ದರಗಳನ್ನು ಹೋಲಿಕೆಯಲ್ಲಿ ಕಡಿಮೆದರದಲ್ಲಿ ಇಟ್ಟುಕೊಂಡು ಬರಲು ನಮಗೆ ಸಾಧ್ಯವಾಗಿದೆ.

40. ಬಹಳ ಕಾಲದಿಂದ ಬಾಕಿ ಇದ್ದಂಥ, ಅಣು ವಿದ್ಯುತ್ ಸ್ಥಾವರವನ್ನು ಕೈಗಾದಲ್ಲಿ ಸ್ಥಾಪಿಸುವುದಾಗಿ ಭಾರತ ಸರ್ಕಾರವು ಘೋಷಿಸಿರುವುದಕ್ಕೆ ನಾವು ತುಂಬಾ ಆಭಾರಿಗಳಾಗಿದ್ದೇವೆ. ಆದರೂ ಈ ಯೋಜನೆ ಕಾರ್ಯಸಿದ್ಧವಾಗುವುದಕ್ಕೆ ಬಹಳಷ್ಟು

ಸಮಯ ಬೇಕಾಗುವುದರಿಂದ ಒಂದು ಭಾರಿ ಶಾಖೋತ್ಪನ್ನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ನೆರವು ನೀಡಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ. ಇದನ್ನು ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿಸಿದರೆ ಅನುಕೂಲ, ಮಂಗಳೂರಿನಲ್ಲಿ ಬಹು-ಇಂಧನ ಶಾಖೋತ್ಪನ್ನ ವಿದ್ಯುತ್ ಯೋಜನೆಗಾಗಿ ಯೋಜನಾ ವರದಿಯನ್ನು ಈಗಾಗಲೇ ಟಾಟಾ ಕನ್ಸಲ್ಟೆಂಟ್ಸ್ ಸಂಸ್ಥೆಯವರು ತಯಾರಿಸಿದ್ದಾರೆ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತ, ಭಾರತ ಚಿನ್ನದಗಣಿ ನಿಯಮಿತ, ಕುದುರೆಮುಖ ಕಬ್ಬಿಣ ಅದಿರು ಕಂಪನಿ ನಿಯಮಿತ, ವಿಜಯನಗರ ಉಕ್ಕು ಸ್ಥಾವರ ಮತ್ತು ಭಾರೀ ಶಾಖೋತ್ಪನ್ನ ವಿದ್ಯುತ್ ಯೋಜನೆ ಇವೆಲ್ಲವುಗಳ ಸಮಸ್ಯೆಗಳಿಗೆ ಪರಸ್ಪರ ಸಂಬಂಧವಿರುವುದರಿಂದ, ಒಟ್ಟಾರೆಯಾಗಿ ಈ ಎಲ್ಲ ಸಮಸ್ಯೆಗಳನ್ನು ಎದುರಿಸಲು ಭಾರತ ಸರ್ಕಾರ ಒಪ್ಪಿಕೊಂಡಿದೆ.

ಸರ್ಕಾರಿ ವಲಯ

41. ನಮ್ಮ ಸರ್ಕಾರಿ ವಲಯದ ಉದ್ಯಮಗಳ ಕಾರ್ಯನಿರ್ವಹಣೆಯನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸುತ್ತೇವೆ ಮತ್ತು ಅಗತ್ಯವೆನಿಸಿದರೆ, ಮಾಡಲಾದ ವಿನಿಯೋಗವು ಸಾರ್ಥಕ ಪ್ರತಿಫಲ ಪಡೆಯುವಂತೆ ಮತ್ತು ಉದ್ಯಮಗಳು ತಮ್ಮ ಸಾಮಾಜಿಕ ಹೊಣೆಗಾರಿಕೆಗಳನ್ನು ನಿರ್ವಹಿಸುವಂತೆ ನೋಡಿಕೊಳ್ಳಲು ಉಗ್ರ ಕ್ರಮವನ್ನು ಕೈಗೊಳ್ಳಲಾಗುವುದು.

ಎಣ್ಣೆ ಬೀಜಗಳು

42. ರಾಜ್ಯದಲ್ಲಿ ಎಣ್ಣೆ ಬೀಜಗಳ ಉತ್ಪಾದನೆಗಾಗಿ ತ್ವರಿತ ಯೋಜನೆಯೊಂದನ್ನು ಪ್ರಾರಂಭಿಸಲು ನಾವು ಭಾರತ ಸರ್ಕಾರದ ನೆರವನ್ನು ಕೋರಿದ್ದೇವೆ. ಈ ಯೋಜನೆಗೆ ಆದಷ್ಟು ತ್ವರಿತವಾಗಿ ಒಪ್ಪಿಗೆ ನೀಡುವಂತೆ ಪ್ರಧಾನಮಂತ್ರಿಗಳು ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರನ್ನು ನಾನು ಕೋರಿದ್ದೇನೆ.

ಯುವಜನ ಕಾರ್ಯಕ್ರಮಗಳು

43. ಇದು ಅಂತರರಾಷ್ಟ್ರೀಯ ಯುವಜನ ವರ್ಷ. ನಾವು ಹಲವಾರು ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ ಮತ್ತು ಇದಕ್ಕಾಗಿ 50 ಲಕ್ಷ ರೂಪಾಯಿಯನ್ನು ಒದಗಿಸಿದ್ದೇನೆ. ಬೆಂಗಳೂರಿನಲ್ಲಿ ಒಂದು ಒಳ ಕ್ರೀಡಾಂಗಣವನ್ನು ನಿರ್ಮಿಸಲಾಗುವುದು ಮತ್ತು ಪೂರ್ಣವಾಗಿರದ ಕ್ರೀಡಾಂಗಣಗಳನ್ನು 1985-86ರಲ್ಲಿ ಪೂರ್ಣಗೊಳಿಸಲಾಗುವುದು.

ಕನ್ನಡ ಮತ್ತು ಸಂಸ್ಕೃತಿ

44. (1) ಆಡಳಿತದಲ್ಲಿ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಬಳಸಲು ಕಳೆದ ಎರಡು ವರ್ಷಗಳಲ್ಲಿ ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಆದರೆ, ಇದರಲ್ಲಿ ಪೂರ್ಣ ಯಶಸ್ಸು ಸಾಧಿಸಲು ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗುವುದೆಂಬ ಅಂಶವನ್ನು ನಾನು ಒಪ್ಪುತ್ತೇನೆ. ಈ ಬಜೆಟ್‌ನಲ್ಲಿ ಕನ್ನಡದ ಅಭಿವೃದ್ಧಿಗಾಗಿ ಹೆಚ್ಚು ಹಣ ಹಂಚಿಕೆ

ಮಾಡಿದ್ದೇವೆ ಮತ್ತು ಒಟ್ಟು ಹಣದ ಏರ್ಪಾಟನ್ನು ಈಗಿರುವ 75 ಲಕ್ಷ ರೂಪಾಯಿಯಿಂದ 1 ಕೋಟಿ ರೂಪಾಯಿಗೆ ಏರಿಸಿದ್ದೇವೆ.

(2) ವಿಶ್ವಕನ್ನಡ ಸಮ್ಮೇಳನವನ್ನು ಪ್ರಸಕ್ತ ವರ್ಷದಲ್ಲಿ ನಡೆಸಲಾಗುವುದು.

(3) ಕನ್ನಡ ಸಾಹಿತ್ಯ ಪರಿಷತ್ತಿನ ಪ್ಲಾಟಿನಮ್ ಮಹೋತ್ಸವ ಕಟ್ಟಡದ ನಿರ್ಮಾಣಕ್ಕಾಗಿ 10 ಲಕ್ಷ ರೂಪಾಯಿ ಮೊತ್ತದ ಹಣವನ್ನು ಒದಗಿಸಲು ಪ್ರಸ್ತಾವಿಸುತ್ತೇನೆ.

(4) ವಾರಣಾಸಿಯ ಕಾಶಿ ವಿದ್ಯಾಪೀಠದ ವಿನಂತಿಯ ಮೇರೆಗೆ ಕನ್ನಡ ಪೀಠವೊಂದನ್ನು ಸ್ಥಾಪಿಸಲು ಪ್ರಸ್ತಾವಿಸುತ್ತೇನೆ. ಅದಕ್ಕಾಗಿ 5 ಲಕ್ಷ ರೂಪಾಯಿ ಹಣದ ಏರ್ಪಾಟನ್ನು ಮಾಡಲಾಗಿದೆ.

(5) ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಭಿವೃದ್ಧಿ ಕಾರ್ಯ ಚಟುವಟಿಕೆಗಳಲ್ಲಿ ನಿರತವಾಗಿರುವ ರಾಜ್ಯದ ಹೊರಗಿರುವ ಸಂಸ್ಥೆಗಳಿಗೆ ಮತ್ತು ಸಂಘ ಗಳಿಗೆ ನೆರವು ನೀಡುವುದಕ್ಕಾಗಿ 35 ಲಕ್ಷ ರೂಪಾಯಿ ಹಣದ ಏರ್ಪಾಡು ಮಾಡಲಾಗಿದೆ.

(6) ಕಳೆದ ಎರಡು ವರ್ಷಗಳಲ್ಲಿ ಆಡಳಿತದಲ್ಲಿ ಬಳಸುವುದಕ್ಕಾಗಿ ಸರ್ಕಾರವು 1790 ಕನ್ನಡ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡಿದೆ. 1985–86ರಲ್ಲಿ ಇನ್ನೂ 2,200 ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸಲು ಪ್ರಸ್ತಾವಿಸಿದ್ದೇವೆ.

45. (1) ನೃತ್ಯ ಕಲೆಯ ಅಭಿವೃದ್ಧಿಗಾಗಿ ಸದ್ಯ ಮೈಸೂರಿನಲ್ಲಿರುವ ಚಾಮರಾಜೇಂದ್ರ ನೃತ್ಯ ಕಲಾ ಅಕೆಡಮಿಯನ್ನು ಇಲಾಖೆಗೆ ವರ್ಗಾಯಿಸಲಾಗುವುದು. ಈ ಉದ್ದೇಶಕ್ಕಾಗಿ 10 ಲಕ್ಷ ರೂಪಾಯಿ ಯನ್ನು ಒದಗಿಸಲಾಗುವುದು.

(2) ಬೆಂಗಳೂರಿನಲ್ಲಿ ಡಾ. ಅಂಬೇಡ್ಕರ್ ಭವನದ ನಿರ್ಮಾಣಕ್ಕಾಗಿ 15 ಲಕ್ಷ ರೂಪಾಯಿ ಮೊತ್ತವನ್ನು ಒದಗಿಸಲು ಪ್ರಸ್ತಾವಿಸುತ್ತೇನೆ.

(3) ಕನ್ನಡ ನಾಟಕದ ಅಭಿವೃದ್ಧಿಗಾಗಿ ಒಂದು ರಂಗಭೂಮಿ ಕಾರ್ಯಾಗಾರ ಮತ್ತು ಎರಡು ಸಣ್ಣ ನಾಟಕ ಶಾಲೆಗಳನ್ನು ಹೊಂದಿರುವ ಒಂದು ಅಕೆಡಮಿ ಕಾಂಪ್ಲೆಕ್ಸ್‌ನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಪಕ್ಕ ದಲ್ಲಿ ಸ್ಥಾಪಿಸಲಾಗುವುದು. ಇದಕ್ಕಾಗಿ 15 ಲಕ್ಷ ರೂಪಾಯಿಯನ್ನು ಒದಗಿಸಲಾಗಿದೆ.

(4) ರವೀಂದ್ರ ಕಲಾಕ್ಷೇತ್ರದ ಹಿಂಬದಿಯಲ್ಲಿ ಬಯಲುರಂಗಮಂದಿರ ವೊಂದನ್ನು ನಿರ್ಮಿಸಲಾಗುವುದು. ಇದಕ್ಕಾಗಿ 5 ಲಕ್ಷ ರೂಪಾಯಿ ಒದಗಿಸಲಾಗುವುದು.

(5) ಹೆಗ್ಗೋಡಿನಲ್ಲಿ ವೃತ್ತಿನಾಟಕ ಮಂದಿರವೊಂದನ್ನು ಸ್ಥಾಪಿಸಲು 5 ಲಕ್ಷ ರೂಪಾಯಿ ಮೊತ್ತವನ್ನು ಒದಗಿಸುತ್ತಿದ್ದೇನೆ.

(6) ಅಲ್ಲದೆ, ಹಳೇಬೀಡು ಕಲಾ ಶಾಲೆಗಾಗಿ 10 ಲಕ್ಷ ರೂಪಾಯಿ ಮೊತ್ತವನ್ನು ಒದಗಿಸುತ್ತಿದ್ದೇನೆ.

46. ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಖ್ಯಾತ ಕನ್ನಡ ಬರಹಗಾರರಿಗೆ ಮತ್ತು ಕಲಾವಿದರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲು ಸರ್ಕಾರ ನಿರ್ಧರಿಸಿದೆ.

ಶಿಕ್ಷಣ

47. ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕದಲ್ಲಿ 432 ಸರ್ಕಾರಿ ಪ್ರೌಢ ಶಾಲೆಗಳು, 460 ಖಾಸಗಿ ಪ್ರೌಢಶಾಲೆಗಳು, 137 ಸರ್ಕಾರಿ ಕಿರಿಯ ಕಾಲೇಜುಗಳು, 163 ಖಾಸಗಿ ಕಿರಿಯ ಕಾಲೇಜುಗಳು, 19 ಸರ್ಕಾರಿ ಪದವಿ ಕಾಲೇಜುಗಳು ಮತ್ತು 38 ಖಾಸಗಿ ಪದವಿ ಕಾಲೇಜುಗಳು, ಒಂದು ಸರ್ಕಾರಿ ಪಾಲಿಟೆಕ್ನಿಕ್, 49 ಖಾಸಗಿ ಪಾಲಿಟೆಕ್ನಿಕ್‌ಗಳು, 12 ಸರ್ಕಾರಿ ಔದ್ಯಮಿಕ ತರಬೇತಿ ಸಂಸ್ಥೆಗಳು ಮತ್ತು 132 ಖಾಸಗಿ ಔದ್ಯಮಿಕ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಅವುಗಳನ್ನು ಬಲಪಡಿಸಲು ನಾವು ಪ್ರಯತ್ನಿಸುತ್ತೇವೆ. ಅದಲ್ಲದೆ, 216 ಖಾಸಗಿ ಪ್ರೌಢ ಶಾಲೆಗಳನ್ನೂ, 94 ಖಾಸಗಿ ಕಿರಿಯ ಕಾಲೇಜುಗಳನ್ನೂ ಈ ಗಳನ್ನೂ, 4 ಖಾಸಗಿ ಪದವಿ ಕಾಲೇಜುಗಳನ್ನೂ ಮತ್ತು 21 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವರ್ಷದಲ್ಲಿ ಮಂಜೂರು ಮಾಡಲಾಗಿದೆ.

48. ಸರ್ಕಾರವು ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದ ಮತ್ತು ಇನ್ನೂ ಸೇವೆಯಲ್ಲಿರುವ ಎಲ್ಲ ಶಿಕ್ಷಕರಿಗೆ ಅನುಕ್ರಮವಾಗಿ 25,000 ರೂಪಾಯಿ ಮತ್ತು 10,000 ರೂಪಾಯಿಯ ಒಟ್ಟು ಮೊತ್ತವನ್ನು ಅನುದಾನ ರೂಪದಲ್ಲಿ ನೀಡಲು ನಿರ್ಧರಿಸಿದೆ. ಈ ಪ್ರಶಸ್ತಿ ಹಣವನ್ನು VI ಸರಣಿಯ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರದ ಮೂಲಕ ಅವರಿಗೆ ಸಂದಾಯ ಮಾಡಲಾಗುವುದು. ನಿವೃತ್ತಿ ಹೊಂದಿರುವವರಿಗೆ ಸರ್ಕಾರವು ಅನುಕ್ರಮವಾಗಿ 250 ರೂಪಾಯಿ ಮತ್ತು 150 ರೂಪಾಯಿ ಮಾಸಿಕ ಗೌರವಧನ ನೀಡಲು ನಿರ್ಧರಿಸಿದೆ.

ಯೋಜನೇತರ ಕಾರ್ಯಕ್ರಮಗಳು

49. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನೇಕ ಯೋಜನೇತರ ಯೋಜನೆಗಳಿವೆ. ಅವು ಯಾವುದೇ ಪ್ರಯೋಜಕ ಉದ್ದೇಶವನ್ನು ಈಡೇರಿಸುವುದಿಲ್ಲ. ಯೋಜನೇತರ ವೆಚ್ಚವನ್ನು ತಗ್ಗಿಸುವ ದೃಷ್ಟಿಯಿಂದ ಅವುಗಳನ್ನು ನಿಲ್ಲಿಸಲು ಪ್ರಸ್ತಾವಿಸುತ್ತೇನೆ.

ನೀರು ಸರಬರಾಜು

50. ಅನುಬಂಧ-IIರಲ್ಲಿ ಪಟ್ಟಿ ಮಾಡಲಾದ ಸ್ಥಳಗಳಲ್ಲಿ ನಗರ ನೀರು ಪೂರೈಕೆ ಯೋಜನೆಗಳನ್ನು ಆದ್ಯತಾ ಕ್ರಮದಲ್ಲಿ ಕೈಗೊಳ್ಳುತ್ತಿದ್ದೇವೆ. ಬೆಂಗಳೂರಿಗಾಗಿ ಕಾವೇರಿ IIIನೇ ಹಂತದ ಯೋಜನೆಯನ್ನು 7ನೇ ಯೋಜನೆಯಲ್ಲಿ ಈಗಾಗಲೇ ಸೇರಿಸಿದ್ದೇವೆ.

51. ಬೆಂಗಳೂರು ಒಂದು ಮಹಾನಗರವಾಗಿ ಅತಿ ಶೀಘ್ರಗತಿಯಲ್ಲಿ ಬೆಳೆಯುತ್ತಿರುವುದನ್ನು ಗಮನಿಸಿದಾಗ, ಈ ನಗರದ ಉತ್ತಮ ಭವಿಷ್ಯಕ್ಕಾಗಿ ಪೂರ್ವ

ಯೋಜನೆಯು ಅವಶ್ಯ. ಆದ್ದರಿಂದ, ಸರ್ಕಾರವು, ಈಗಿರುವ ಸಂಯುಕ್ತ ಜಿಲ್ಲೆಯಿಂದ ಬೆಂಗಳೂರು ನಗರ ಜಿಲ್ಲೆಯೊಂದನ್ನು ರಚಿಸುತ್ತದೆ. ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದ್ದೇವೆ. ಬೆಂಗಳೂರಿನಲ್ಲಿ ಕ್ಷಿಪ್ರ ಸಾರಿಗೆ ವ್ಯವಸ್ಥೆಗೆ ಏರ್ಪಾಡು ಮಾಡುವ ಅವಶ್ಯಕತೆಯ ಬಗ್ಗೆ ಪ್ರಧಾನ ಮಂತ್ರಿಯವರೊಡನೆ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರೊಡನೆ ಚರ್ಚಿಸಿದ್ದೇನೆ ಮತ್ತು ಇದನ್ನು 7ನೇ ಯೋಜನೆಯಲ್ಲಿ ಕೈಕೊಳ್ಳಲು ಅವರನ್ನು ಕೋರಿದ್ದೇನೆ.

ಸಮಾಜ ಕಲ್ಯಾಣ

52. ಕಳೆದ ಎರಡು ವರ್ಷಗಳಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರ ಸಮಸ್ಯೆಗಳಿಗೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಿದ್ದೇವೆ ಮತ್ತು ಹಾಗೆ ಆದ್ಯತೆ ನೀಡುವುದನ್ನು ಮುಂದುವರಿಸುತ್ತೇವೆ. ವಿಶೇಷ ಘಟಕ ಯೋಜನೆ ಮತ್ತು ಗುಡ್ಡಗಾಡು ಉಪ ಯೋಜನೆಯು ಮೇರೆಗೆ ಪ್ರತಿ ಕುಟುಂಬದ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಲಾಗುವುದು. ಅಭಿವೃದ್ಧಿಗೊಳಿಸಲು ಉದ್ದೇಶಿಸಲಾದ ಕುಟುಂಬದ ಆರ್ಥಿಕ ಸಂಧಾರಣೆಗಾಗಿ ಪ್ರಯೋಜನಗಳು ಒಟ್ಟಾಗಿ ದೊರೆಯುವಂತೆ ಮಾಡುವ ಸಲುವಾಗಿ ವಿವಿಧ ಅಭಿವೃದ್ಧಿ ಇಲಾಖೆಗಳಲ್ಲಿ ಆ ಬಗ್ಗಿನ ವೆಚ್ಚಕ್ಕಾಗಿ ತೆಗೆದಿರಿಸಿದ ಹಣವನ್ನು ಒಂದೇ ಗುಂಪಾಗಿ ಒಗ್ಗೂಡಿಸಲಾಗುವುದು.

53. ಕೋಳಿ ಸಾಕಣೆ ಮತ್ತು ಹಂದಿ ಅಭಿವೃದ್ಧಿ ಮತ್ತು ಕ್ರಯ ವಿಕ್ರಯಕ್ಕೆ ಸಂಬಂಧಿಸಿದಂತೆ ಸಮುದಾಯದ ಬಹು ಜನಕ್ಕೆ ಸಹಾಯ ನೀಡಲು ವಿಶೇಷ ಘಟಕ ಯೋಜನೆಯನ್ನು ಸಹ ಕೈಕೊಂಡಿದ್ದೇವೆ. 1985-86ರಲ್ಲಿ ವಿಶೇಷ ಘಟಕ ಯೋಜನೆ ಮೇರೆಗೆ 67.22 ಕೋಟಿ ರೂಪಾಯಿ ಮತ್ತು ಗುಡ್ಡಗಾಡು ಉಪ ಯೋಜನೆ ಮೇರೆಗೆ 4.29 ಕೋಟಿ ರೂಪಾಯಿ ವೆಚ್ಚಕ್ಕಾಗಿ ಪ್ರಸ್ತಾವಿಸಲಾಗಿದೆ.

ಅಲ್ಪ ಸಂಖ್ಯಾತ ವರ್ಗಗಳ ಅಭಿವೃದ್ಧಿ ನಿಗಮ

54. ಅಲ್ಪ ಸಂಖ್ಯಾತ ವರ್ಗಗಳ ಅಭಿವೃದ್ಧಿ ನಿಗಮಕ್ಕಾಗಿ 1 ಕೋಟಿ ರೂಪಾಯಿ ಏರ್ಪಾಡು ಮಾಡಲಾಗುವುದು.

ಮಹಿಳಾ ಕಲ್ಯಾಣ

55. ಮಹಿಳೆಯರ ಅಭಿವೃದ್ಧಿಗಾಗಿ ನಿಗಮವೊಂದನ್ನು ಸ್ಥಾಪಿಸುವ ಮತ್ತು ಮಹಿಳಾ ಕಲ್ಯಾಣಕ್ಕಾಗಿ ವಿಶೇಷ ಘಟಕ ಯೋಜನೆಯೊಂದನ್ನು ರೂಪಿಸುವ ಒಂದು ಪ್ರಸ್ತಾವವನ್ನು ಸರ್ಕಾರ ಪರಿಶೀಲಿಸುತ್ತಿದೆ. ಹಿಂದೂ ಅವಿಭಕ್ತ ಕುಟುಂಬಗಳ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ದಾಯಾದಿ ಹಕ್ಕುಗಳನ್ನು ನೀಡಲು ಶಾಸನವೊಂದನ್ನು ತರಲು ನಾವು ಪ್ರಸ್ತಾವಿಸಿದ್ದೇವೆ.

ಉದ್ಯೋಗ ವಿನಿಮಯ ಕೇಂದ್ರಗಳು

56. ಬೆಂಗಳೂರಿನಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಕ್ಕೆ ನಾವು ಈಗಾಗಲೇ ಕಂಪ್ಯೂಟರನ್ನು ಅಳವಡಿಸಿದ್ದೇವೆ. ಇತರ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ

ಹಂತಹಂತವಾಗಿ ಕಂಪ್ಯೂಟರ್ ಅಳವಡಿಸಲು ಪ್ರಸ್ತಾವಿಸುತ್ತೇವೆ. ಉದ್ಯೋಗ ಆರಸುವವರು ತೊಂದರೆಗಳನ್ನು ಎದುರಿಸುವುದನ್ನು ತಪ್ಪಿಸುವಂತೆ ಹಾಗೂ ಈ ವಿನಿಮಯ ಕೇಂದ್ರಗಳ ಕಾರ್ಯದಕ್ಷತೆಯಲ್ಲಿ ಸುಧಾರಣೆಯಾಗುವಂತೆ ಉದ್ಯೋಗ ವಿನಿಮಯ ಕೇಂದ್ರಗಳನ್ನು ಏಕರೂಪಗೊಳಿಸಲಾಗುವುದು ಮತ್ತು ಅವುಗಳ ಕಾರ್ಯ ವಿಧಾನವನ್ನು ಸರಳಗೊಳಿಸಲಾಗುವುದು. ಅರ್ಜಿದಾರರ ಭಾವಚಿತ್ರ ಮತ್ತು ಅವರ ವಿವರಗಳನ್ನು ಹೊಂದಿರುವ ಹೊಸ ಗುರುತು ಚೀಟಿಯನ್ನು ನೀಡಲಾಗುವುದು.

57. ನೋಂದಣಿಗಾಗಿ ಈ ವಿನಿಮಯ ಕೇಂದ್ರಗಳಿಗೆ ಬರುವ ಅರ್ಜಿದಾರರನ್ನು (ಎ) ಎಸ್. ಎಸ್. ಎಲ್. ಸಿ. ಆಗಿಲ್ಲದವರು, (ಬಿ) ಎಸ್. ಎಸ್. ಎಲ್. ಸಿ. ಆಗಿರುವವರು ಮತ್ತು ಪದವೀಧರರಲ್ಲದವರು, (ಸಿ) ಕಲೆ ಮತ್ತು ವಿಜ್ಞಾನದಲ್ಲಿ ಪದವೀಧರರು ಮತ್ತು ದ್ವಿ-ಪದವೀಧರರು ಮತ್ತು (ಡಿ) ತಾಂತ್ರಿಕ ಪದವೀಧರರು ತಾಂತ್ರಿಕ ಡಿಪ್ಲೊಮಾ ಹೊಂದಿರುವವರು ಎಂಬ ನಾಲ್ಕು ವಿವಿಧ ವರ್ಗಗಳಲ್ಲಿಡಲಾಗುವುದು.

ಕನ್ನಡ ಚಲನಚಿತ್ರ

58. ಕನ್ನಡ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹೊಸ ಕಾರ್ಯ ನೀತಿಯ ರೂಪರೇಷೆಗಳು ಈ ಮುಂದಿನಂತಿವೆ. ಅವುಗಳನ್ನು ಕನ್ನಡ ಚಲನಚಿತ್ರ ಉದ್ಯಮದ ಪ್ರತಿನಿಧಿಗಳೊಡನೆ ಸವಿವರವಾಗಿ ಚರ್ಚಿಸಿದ ನಂತರ ನಿರ್ಧರಿಸಲಾಗಿದೆ. ಈ ವಿಷಯದಲ್ಲಿ ಸರ್ಕಾರವು ರಚಿಸಿದ ಸಮಿತಿಯು ನೀಡಿದ ಶಿಫಾರಸುಗಳನ್ನು ಪರಿಶೀಲಿಸಲಾಗಿದೆ.

(1) ಚಲನಚಿತ್ರಗಳಿಗೆ ಮನೋರಂಜನೆ ತೆರಿಗೆಯಿಂದ ವಿನಾಯಿತಿ ನೀಡುವ ಈಗಿರುವ ಕಾರ್ಯನೀತಿಯು ಡಿಸೆಂಬರ್ 31, 1985ರ ವರೆಗೆ ಮುಂದುವರಿಯುವುದು. 1-1-1986ರಿಂದ ರಾಜ್ಯದೊಳಗೆ ತಯಾರಿಸಲಾದ ಕನ್ನಡ ಚಲಚ್ಚಿತ್ರಗಳಿಗೆ ಈಗಿರುವಂತೆ ಶೇಕಡಾ 50ರಷ್ಟು ತೆರಿಗೆ ವಿನಾಯಿತಿ ನೀಡಿಕೆ ಮುಂದುವರಿಯುವುದು. ಆದರೂ, 1986ರಿಂದ ರಾಜ್ಯದ ಹೊರಗೆ ತಯಾರಿಸಲಾದ ಕನ್ನಡ ಚಿತ್ರಗಳಿಗೆ ಶೇಕಡಾ 50 ರಷ್ಟು ಮನೋರಂಜನ ತೆರಿಗೆ ವಿನಾಯಿತಿ ನೀಡುವುದನ್ನು ಮುಂದುವರಿಸಲಾಗುವುದು. ಆದರೆ, ಈ ವಿನಾಯಿತಿ ಅವಧಿಯನ್ನು ಆರು ತಿಂಗಳಿಗೆ ಮಾತ್ರ ಸೀಮಿತಗೊಳಿಸಲಾಗುವುದು. ರಾಜ್ಯದ ಹೊರಗೆ ತಯಾರಿಸಲಾದ ಚಿತ್ರಗಳಿಗೆ ದೊರೆಯುವ ರಿಯಾಯಿತಿಯು 1-1-1986ರಿಂದ ಪ್ರಾರಂಭಿಸಿ ಒಂದು ವರ್ಷದ ವರೆಗೆ ಮಾತ್ರ ಮುಂದುವರಿಯುತ್ತದೆ.

(2) ಈಗಿರುವ ಸಹಾಯ ಧನ ನೀಡಿಕೆ ಯೋಜನೆ 1985ರ ಡಿಸೆಂಬರ್ ಅಂತ್ಯದವರೆಗೆ ಮುಂದುವರೆಯುವುದು. 1-1-1986ರಿಂದ ಸಹಾಯ ಧನ ನೀಡಿಕೆ ಯೋಜನೆಯ ಮಾದರಿ ಈ ಮುಂದಿನಂತಿರುತ್ತದೆ.

(ಎ) ರಾಜ್ಯದ ಹೊರಗೆ ತಯಾರಿಸಲಾಗುವ ಚಲನಚಿತ್ರಗಳಿಗೆ ಯಾವುದೇ ರೀತಿಯ ಸಹಾಯಧನ ಇಲ್ಲ.

(ಬಿ) ರಾಜ್ಯದೊಳಗೆ ತಯಾರಿಸಲಾಗುವ ಕನ್ನಡ ಕಪ್ಪು ಬಿಳುಪು ಮತ್ತು ವರ್ಣಚಿತ್ರಗಳಿಗೆ ಸಂದಾಯ ಮಾಡಲಾಗುವ ಸಹಾಯಧನವನ್ನು ಕ್ರಮವಾಗಿ 1.5 ಲಕ್ಷ ರೂ. ಮತ್ತು 2.5 ಲಕ್ಷ ರೂಪಾಯಿಗೆ ಹೆಚ್ಚಿಸಲಾಗುವುದು.

(ಸಿ) ರಾಜ್ಯದೊಳಗೆ ತಯಾರಿಸುವ ಕನ್ನಡದ ಕಲಾತ್ಮಕ ಅಥವಾ ಪ್ರಯೋಗಾತ್ಮಕ ಚಿತ್ರಗಳಿಗೆ 3 ಲಕ್ಷ ರೂಪಾಯಿಗಳ ಹೆಚ್ಚಿನ ಸಹಾಯಧನ ನೀಡಲಾಗುವುದು. ಸರ್ಕಾರವು ಈ ಕುರಿತು ಒಂದು ಸಮಿತಿಯನ್ನು ರಚಿಸುವುದು.

(3) ಕನ್ನಡ ಚಲನಚಿತ್ರಗಳ ಕಡ್ಡಾಯ ಪ್ರದರ್ಶನದ ಸರ್ಕಾರದ ಕಾರ್ಯನೀತಿಯನ್ನು, ಕರ್ನಾಟಕದ ಉಚ್ಚ ನ್ಯಾಯಾಲಯವು ನೀಡಿದ ತಡೆಆಜ್ಞೆಯ ಕಾರಣದಿಂದಾಗಿ ಈವರೆಗೂ ಕಾರ್ಯಗತಗೊಳಿಸಲಾಗಿಲ್ಲ. ಇದು ಈಗಿರುವ ಚಿತ್ರಮಂದಿರಗಳಿಗೆ ಸಂಬಂಧಪಟ್ಟಿದೆ. ಆದರೆ ಇನ್ನು ಮುಂದೆ ನಿರ್ಮಿಸಲಾಗುವ ಚಿತ್ರಮಂದಿರಗಳ ಸಂಬಂಧದಲ್ಲಿ, ಅದರ ಮಾಲೀಕನು ವರ್ಷದಲ್ಲಿ ಕನಿಷ್ಠ ಹನ್ನೆರಡು ವಾರಗಳವರೆಗೆ ತನ್ನ ಚಿತ್ರಮಂದಿರದಲ್ಲಿ ಕನ್ನಡ ಚಿತ್ರವನ್ನು ಪ್ರದರ್ಶಿಸಲು ಒಪ್ಪಿದ ಹೊರತು ಸರ್ಕಾರವು ಲೈಸೆನ್ಸು ನೀಡುವುದಿಲ್ಲ.

(4) ಬೆಂಗಳೂರಿನ 'ಸಿಂಫೋನಿ' ಮತ್ತು 'ಪೂನಂ' ಚಿತ್ರಮಂದಿರಗಳನ್ನು ಪೂರ್ಣವಾಗಿ ಕನ್ನಡ ಚಿತ್ರಗಳ ಪ್ರದರ್ಶನಕ್ಕಾಗಿಯೇ ಬಳಸಿಕೊಳ್ಳುವ ಸಲುವಾಗಿ ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲು ಉದ್ದೇಶಿಸಿದೆ.

(5) ಮಾರುಕಟ್ಟೆ ಸಂಕೀರ್ಣಗಳನ್ನು ನಿರ್ಮಿಸಲು ಈಗಿರುವ ಚಿತ್ರಮಂದಿರಗಳನ್ನು ಕೆಡವಿದಾಗಲ್ಲೆಲ್ಲಾ ಮಾಲೀಕನು ಆ ಸಂಕೀರ್ಣದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಒಂದು ಚಿತ್ರಮಂದಿರವನ್ನು ನಿರ್ಮಿಸುವುದನ್ನು ಕಡ್ಡಾಯಗೊಳಿಸಲು ಸರ್ಕಾರವು ನಿರ್ಧರಿಸಿದೆ.

(6) ಒಂದೇ ಸ್ಥಳದಲ್ಲಿ ಮೂರು ತಿಂಗಳ ಗರಿಷ್ಠ ಅವಧಿಯಲ್ಲಿ ಚಲನಚಿತ್ರ ಪ್ರದರ್ಶಿಸುವ ಚಿತ್ರಮಂದಿರಗಳನ್ನು ಸಂಚಾರಿ ಚಿತ್ರಮಂದಿರಗಳೆಂದು ಪರಿಗಣಿಸಲು ಸರ್ಕಾರ ನಿರ್ಧರಿಸಿದೆ. ಇನ್ನಿತರ ಸಂಚಾರಿ ಚಲನಚಿತ್ರ ಮಂದಿರಗಳನ್ನು ಅರೆ-ಖಾಯಂ ಚಿತ್ರಮಂದಿರಗಳೆಂದು ಪರಿಗಣಿಸಲಾಗುವುದು. ಅವರಿಗೆ ಖಾಯಂ ಚಿತ್ರಮಂದಿರಗಳಂತೆ ಮೂರು ವರ್ಷಗಳ ಅವಧಿಗಾಗಿ ಕಾನೂನಿಗನುಸಾರವಾಗಿ ನಿರಾಕ್ಷೇಪಣ ಪ್ರಮಾಣ ಪತ್ರವನ್ನು ನೀಡಲಾಗುವುದು.

(7) ಕಡಿಮೆ ವೆಚ್ಚದ ಜನತಾ ಚಿತ್ರಮಂದಿರಗಳನ್ನು ಸ್ಥಾಪಿಸಲು ಜನರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರಿ ಜಮೀನು ಲಭ್ಯವಿರುವ ಕಡೆಗಳಲ್ಲೆಲ್ಲಾ ಅವುಗಳನ್ನು ಗುತ್ತಿಗೆಗೆ ಕೊಡಲು ಸರ್ಕಾರ ನಿರ್ಧರಿಸಿದೆ. ಈ ಜನತಾ ಚಿತ್ರಮಂದಿರಗಳನ್ನು ನಿರ್ಮಿಸುವಲ್ಲಿ ಸರ್ಕಾರವು ಸಕ್ರಿಯ ನೆರವು ನೀಡುವುದು.

(8) ಕರ್ನಾಟಕದ ಪ್ರಖ್ಯಾತ ಚಲನಚಿತ್ರ ನಿರ್ದೇಶಕರಾದ ದಿವಂಗತ ಶ್ರೀ ಪುಟ್ಟಣ್ಣ ಕಣಗಾಲ್ ಇವರ ಸ್ಮಾರಕಾರ್ಥ, ಕರ್ನಾಟಕದೊಳಗೆ ಪ್ರತಿವರ್ಷ ತಯಾರಿಸಲಾದ ಕನ್ನಡ ಚಲಚ್ಚಿತ್ರಗಳ ಉತ್ತಮ ನಿರ್ದೇಶಕರಿಗೆ ಒಂದು ಲಕ್ಷ ರೂಪಾಯಿಯ 'ಎಸ್. ಆರ್. ಪುಟ್ಟಣ್ಣ ಕಣಗಾಲ್ ಪ್ರಶಸ್ತಿ' ನೀಡಲು ಸರ್ಕಾರವು ನಿರ್ಧರಿಸಿದೆ.

ಮಾನ್ಯ ಸದಸ್ಯರಿಗೆ ಸೌಲಭ್ಯಗಳು

59. ವಿಧಾನಮಂಡಲದ ಮಾನ್ಯ ಸದಸ್ಯರು ಮೋಟಾರು ವಾಹನಗಳನ್ನು ಖರೀದಿಸುವುದಕ್ಕೆ ಮುಂಗಡ ಹಣ ನೀಡಲು ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಅನುಸರಿಸತಕ್ಕ ಕಾರ್ಯವಿಧಾನವು ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ನಿರ್ದಿಷ್ಟಪಡಿಸಿದಂತೆಯೇ ಇರುವುದು.

ಸರ್ಕಾರಿ ನೌಕರರಿಗೆ ಪರಿಹಾರ

60. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ತುಟ್ಟಿಭತ್ಯದ ಒಂದು ಹೆಚ್ಚಿನ ಕಂತು, ತಾತ್ಕಾಲಿಕ ಪರಿಹಾರ, ಬೋನಸ್, ವೇತನ ಆಯೋಗದ ರಚನೆ, ಉದಾರಗೊಳಿಸಿದ ನಿವೃತ್ತಿ ವೇತನ ಸೌಲಭ್ಯಗಳ ಅಳವಡಿಕೆ ಮುಂತಾದವುಗಳನ್ನು ನೀಡುವಂತೆ ಒತ್ತಾಯಿಸುತ್ತಿದೆ. ನಾನು ಈ ಬಗ್ಗೆ ನೌಕರರ ಪ್ರತಿನಿಧಿಗಳೊಂದಿಗೆ ಸವಿವರವಾಗಿ ಚರ್ಚಿಸಿದ್ದೇನೆ.

61. ಈ ಹಿಂದೆ 1982ರ ಜನವರಿ ತಿಂಗಳಲ್ಲಿ ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಆಗಿತ್ತು. ಆ ತರುವಾಯ ಕೇಂದ್ರ ಸರ್ಕಾರವು ಕೇಂದ್ರ ವೇತನ ಆಯೋಗವೊಂದನ್ನು ರಚಿಸಿದ್ದು ಇದರ ವರದಿ ಈ ವರ್ಷದ ಕೊನೆಯ ವೇಳೆಗೆ ಸಿದ್ಧವಾಗುವುದೆಂದು ನಿರೀಕ್ಷಿಸಲಾಗಿದೆ. ವೇತನ ಆಯೋಗದ ವರದಿ ಬರುವುದಕ್ಕೆ ಮೊದಲೇ ಭಾರತ ಸರ್ಕಾರ ಈಗಾಗಲೇ ಎರಡು ತಾತ್ಕಾಲಿಕ ಪರಿಹಾರ ಕಂತುಗಳನ್ನು ನೀಡಿದೆ. ಇದರಿಂದಾಗಿ, ಕೇಂದ್ರ ಸರ್ಕಾರೀ ನೌಕರರು ಹಾಗೂ ರಾಜ್ಯ ಸರ್ಕಾರಿ ನೌಕರರ ವೇತನದಲ್ಲಿ ತಾರತಮ್ಯ ಉಂಟಾಗಿದೆ. ವೇತನ ಶ್ರೇಣಿಗಳ ಪರಿಷ್ಕರಣೆ, ತಾತ್ಕಾಲಿಕ ಪರಿಹಾರ, ತುಟ್ಟಿಭತ್ಯದಲ್ಲಿ ಹೆಚ್ಚಳ ಮುಂತಾದ ವಿಷಯಗಳಲ್ಲಿ ಏಕಪಕ್ಷೀಯ ನಿರ್ಣಯಗಳನ್ನು ಕೈಗೊಳ್ಳಬಾರದೆಂದೂ ಹಾಗೆ ಕೈಗೊಳ್ಳುವುದರಿಂದ ರಾಜ್ಯ ಸರ್ಕಾರಗಳಿಗೆ ಕಷ್ಟಕರ ಸ್ಥಿತಿಯುಂಟಾಗುವುದೆಂದೂ ನಾನು ಭಾರತ ಸರ್ಕಾರವನ್ನು ಈ ಹಿಂದೆ ಪದೇ ಪದೇ ವಿನಂತಿಸಿದ್ದೇನೆ. ಇಂಥ ನಿರ್ಣಯಗಳು ಇಡೀ ರಾಷ್ಟ್ರೀಯ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುವುದರಿಂದ, ಇಂಥ ವಿಷಯಗಳಲ್ಲಿ ರಾಷ್ಟ್ರೀಯ ಅಭಿಪ್ರಾಯವನ್ನು ಪಡೆದುಕೊಳ್ಳಬೇಕು. ನಮಗೀಗ ಅನ್ಯ ಮಾರ್ಗವೇ ಇಲ್ಲದಂತಾಗಿದೆ. ಆದ್ದರಿಂದ ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳ ಪರಿಷ್ಕರಣದ ಅಗತ್ಯತೆಯನ್ನು ನಾವು ಈಗ ಪರಿಶೀಲಿಸುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ. ಈ ಉದ್ದೇಶಕ್ಕಾಗಿ ವೇತನ ಆಯೋಗವೊಂದನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ. ಒಂದು ವರ್ಷದೊಳಗೆ ತನ್ನ ವರದಿಯನ್ನು ಸಲ್ಲಿಸುವಂತೆ ಆಯೋಗವನ್ನು ಕೋರಲಾಗುವುದು.

62. ರಾಜ್ಯ ಸರ್ಕಾರಿ ನೌಕರರು ಮತ್ತು ಅನುದಾನ ಪಡೆಯುವ ಸಂಸ್ಥೆಗಳ ನೌಕರರಿಗೆ ಈ ಕೆಳಗಿನ ಹೆಚ್ಚಿನ ಸೌಲಭ್ಯಗಳನ್ನು ಮಂಜೂರು ಮಾಡಲಾಗುವುದು:—

(ಎ) ಈ ವೇತನ ಆಯೋಗದ ವರದಿ ಬರುವ ತನಕ ನೌಕರರ ವೇತನದ ಶೇಕಡ 7½ ಯು ದರದಲ್ಲಿ ಪ್ರತಿ ತಿಂಗಳಿಗೆ ಕನಿಷ್ಠ 50 ರೂ. ಮತ್ತು ಗರಿಷ್ಠ 240 ರೂಪಾಯಿ ಮಿತಿಗೆ ಒಳಪಟ್ಟು ತಾತ್ಕಾಲಿಕ ಪರಿಹಾರವನ್ನು ನೀಡಲಾಗುವುದು. ಈ ತಾತ್ಕಾಲಿಕ ಪರಿಹಾರವನ್ನು 1-8-1985 ರಿಂದ ಮಂಜೂರು ಮಾಡಲಾಗಿದೆ. 1985–86 ರಲ್ಲಿ ಅವರಿಗೆ ಸಂದಾಯ ಮಾಡಬೇಕಾದ ತಾತ್ಕಾಲಿಕ ಪರಿಹಾರದ ಸಂಪೂರ್ಣ ಮೊಬಲಗನ್ನು VI ನೇ ಸರಣಿಯ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರಗಳಲ್ಲಿ ಠೇವಣಿ ಇಡಲಾಗುವುದು. ಆಯೋಗವು ವೇತನ ಶ್ರೇಣಿ ಗಳನ್ನು ಪರಿಷ್ಕರಿಸಿದಾಗ, ಈಗ ಮಂಜೂರು ಮಾಡಲಾದ ತಾತ್ಕಾಲಿಕ ಪರಿಹಾರದ ಮೊಬಲಗನ್ನು ಗಣನೆಗೆ ತೆಗೆದುಕೊಂಡು ಅದನ್ನು ಯಥೋಚಿತವಾಗಿ ಸರಿಹೊಂದಿಸಲಾಗುವುದು. ಈ ವರ್ಷ ಈ ಮೊತ್ತವನ್ನು ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರದಲ್ಲಿ ವಿನಿಯೋಗಿಸಲಾಗುವುದಾದರೂ, ನಮಗೆ ತಗಲುವ ನಗದು ವೆಚ್ಚ 37.68 ಕೋಟಿ ರೂಪಾಯಿ.

(ಬಿ) 1-1-1985 ರಿಂದ ಜಾರಿಗೆ ಬರುವಂತೆ 576 ಸೂಚ್ಯಾಂಕಗಳ ಮಟ್ಟದಲ್ಲಿ ತುಟ್ಟಿಭತ್ಯದ ಒಂದು ಹೆಚ್ಚಿನ ಕಂತನ್ನು ಮಂಜೂರು ಮಾಡಲು ನಿರ್ಧರಿಸಿದೆ. ಆದರೆ, 1-1-1985 ರಿಂದ 1985 ರ ಜುಲೈ ಕೊನೆಯವರೆಗೆ ಸಂದಾಯವಾಗಬೇಕಾದ ಬಾಕಿಯನ್ನು VIನೇ ಸರಣಿಯ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರಗಳಲ್ಲಿ ವಿನಿಯೋಗಿಸ ಲಾಗುವುದೆಂಬ ಷರತ್ತಿಗೆ ಇದು ಒಳಪಟ್ಟಿರುತ್ತದೆ. ತುಟ್ಟಿ ಭತ್ಯದ ಈ ಹೆಚ್ಚಿನ ಕಂತನ್ನು ವಿಶ್ರಾಂತಿ ವೇತನದಾರರಿಗೆ ನಗದು ರೂಪದಲ್ಲಿ ನೀಡಲಾಗುವುದು.

(ಸಿ) ವಿಶ್ರಾಂತಿ ವೇತನದ ಸೌಲಭ್ಯಕ್ಕಾಗಿ 568 ಸೂಚ್ಯಾಂಕಗಳವರೆಗೆ ಮಂಜೂರು ಮಾಡಲಾಗಿರುವ ತುಟ್ಟಿಭತ್ಯವನ್ನು ಮೂಲ ವೇತನದಲ್ಲಿ ಸೇರಿಸಲು ಮತ್ತು ಈಗ ಇರುವ 1500 ರೂ.ಗಳ ವಿಶ್ರಾಂತಿ ವೇತನದ ಮಾಸಿಕ ಮಿತಿಯನ್ನು ತೆಗೆದು ಹಾಕಲು ಸಹ ನಾನು ಉದ್ದೇಶಿಸಿದ್ದೇನೆ.

(ಡಿ) ವಿಶ್ರಾಂತಿ ವೇತನವನ್ನು ಲೆಕ್ಕ ಹಾಕುವ ಈಗಿರುವ ಸೂತ್ರವನ್ನು ನಿವೃತ್ತನಾಗುವ ನೌಕರನು ತನ್ನ ನಿವೃತ್ತಿಯ ಸಮಯದಲ್ಲಿ ಪಡೆಯುವ ವೇತನ ಶೇಕಡಾ 50ಕ್ಕೆ ಲೆಕ್ಕ ಹಾಕುವಂತೆ ಮಾರ್ಪಾಟು ಮಾಡ ಲಾಗುವುದು.

(ಇ) ಮರಣ ಹಾಗೂ ನಿವೃತ್ತಿವೇತನ ಉಪದಾನದ ಗರಿಷ್ಠ ಮಿತಿಯನ್ನು 36,000 ರೂಪಾಯಿಯಿಂದ 50,000 ರೂಪಾಯಿಗೆ ಏರಿಸಲು ನಾನು ಉದ್ದೇಶಿಸಿದ್ದೇನೆ.

63. ಆರ್ಥಿಕ ನಿರ್ಬಂಧಗಳಿದ್ದರೂ ನಾವು ತೆಗೆದುಕೊಂಡಿರುವ ಈ ನಿಲುವನ್ನು ನಮ್ಮ ಸರ್ಕಾರಿ ನೌಕರರು ಮೆಚ್ಚುವರೆಂದು ನಾನು ನಂಬಿದ್ದೇನೆ.

ವಾರಕ್ಕೆ ಐದು ಕೆಲಸದ ದಿನಗಳು

64. 5-8-1985 ರಿಂದ ಸರ್ಕಾರಿ ನೌಕರರು ವಾರಕ್ಕೆ ಐದು ದಿನಗಳು ಕೆಲಸ ಮಾಡುವ ವ್ಯವಸ್ಥೆಯನ್ನು ನಾವು ಪ್ರಾರಂಭಿಸುತ್ತೇವೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಮತ್ತು ಒಟ್ಟು ಕೆಲಸದ ಸಮಯದ ಗಂಟೆ ಕಡಿಮೆಯಾಗದಂತೆ ಕೆಲಸದ ಸಮಯವನ್ನು ನಿಯಂತ್ರಿಸಲಾಗುವುದು.

ಸರ್ಕಾರಿ ಸಾರಿಗೆ ವ್ಯವಸ್ಥೆ

65. ಕೇಂದ್ರ ಅಬ್ಕಾರಿ ಸುಂಕಗಳು ಮತ್ತು ನಿಗದಿತ ಬೆಲೆಗಳನ್ನು ಹೆಚ್ಚಿಸಿರುವುದರಿಂದ, ಡೀಸೆಲ್, ಟೈರುಗಳು, ಬಿಡಿ ಭಾಗಗಳು ಮುಂತಾದ ಮೂಲಭೂತ ಪರಿಕರಗಳ ವೆಚ್ಚದ ಬಗ್ಗೆ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯು ಹೆಚ್ಚಿನ ವೆಚ್ಚವನ್ನು ಗಣನೀಯ ಪ್ರಮಾಣದಲ್ಲಿ ವಹಿಸಬೇಕಾಯಿತೆಂಬ ಅಂಶ ಸದನಕ್ಕೆ ತಿಳಿದಿದೆ. ಅಲ್ಲದೆ, ಮಜೂರಿ ಪರಿಷ್ಕರಣೆಗಾಗಿ ನಿಗಮದ ಆಡಳಿತ ಸಂಸ್ಥೆಯು ನೌಕರರ ಸಂಘದ ಪ್ರತಿನಿಧಿಗಳೊಂದಿಗೆ ಇತ್ತೀಚೆಗೆ ಒಪ್ಪಂದವನ್ನು ಮಾಡಿಕೊಂಡಿದ್ದು, ಇದು 1-1-1984 ರಿಂದ ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ. ಈ ಮಜೂರಿ ಪರಿಷ್ಕರಣೆಯಿಂದಾಗಿ ವಾರ್ಷಿಕ 10.5 ಕೋಟಿ ರೂಪಾಯಿ ಹೆಚ್ಚಿನ ವೆಚ್ಚವನ್ನು ನಿಗಮವು ವಹಿಸಬೇಕಾಗುವುದು. ಕಳೆದ ವರ್ಷದ ಕೆ.ಎಸ್.ಆರ್.ಟಿ.ಸಿ.ಯ ಬಂಡವಾಳ ವೆಚ್ಚದ ಕಾರ್ಯಕ್ರಮ 30.6 ಕೋಟಿ ರೂಪಾಯಿ. ಇದಕ್ಕೆ ರಾಜ್ಯ ಸರ್ಕಾರ 12.14 ಕೋಟಿ ರೂಪಾಯಿ ಅಂಶದಾನ ನೀಡಿತ್ತು. ಪ್ರಸಕ್ತ ವರ್ಷದ ಅದರ ಬಂಡವಾಳ ಕಾರ್ಯಕ್ರಮ 31·28 ಕೋಟಿ ರೂಪಾಯಿ. ಇದಕ್ಕೆ ರಾಜ್ಯ ಸರ್ಕಾರ 11·32 ಕೋಟಿ ರೂಪಾಯಿ ಅಂಶದಾನ ನೀಡಬೇಕಾಗುತ್ತದೆ, ನಿಗಮವು ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾದರೆ, ಅದು ತನ್ನ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಅವಶ್ಯಕ.

66. **ಮಾರಾಟ ತೆರಿಗೆ ಪರಿಹಾರಗಳು :**

ಈಗಿರುವ ಮಾರಾಟ ತೆರಿಗೆ ವ್ಯವಸ್ಥೆಯನ್ನು ಏಕರೂಪಗೊಳಿಸಲು, ತೆರಿಗೆ ಸಂಗ್ರಹಣೆಯನ್ನು ಉತ್ತಮಗೊಳಿಸಲು ಮತ್ತು ವ್ಯಾಪಾರವನ್ನು ಪಲ್ಲಟಗೊಳಿಸುವುದನ್ನು ತಡೆಗಟ್ಟಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

(i) ಕನ್ನಡಕಕ್ಕೆ ಸಂಬಂಧಿಸಿದ ಸರಕುಗಳಿಗೆ ತೆರಿಗೆ ವಿನಾಯಿತಿ ;

(ii) ರಾಜ್ಯದ ಪ್ಲಾಸ್ಟಿಕ್ ಸರಕುಗಳ ತಯಾರಕರು ಮಾಡುವ ಪ್ಲಾಸ್ಟಿಕ್ ಸ್ಕ್ರಾಪ್ ಖರೀದಿ ಮೇಲೆ ತೆರಿಗೆ ವಿನಾಯಿತಿ ;

(iii) ಅಧಿಸೂಚಿಸಲಾಗುವ ಪ್ರಾಣ ರಕ್ಷಕ ಔಷಧಗಳಿಗೆ ತೆರಿಗೆ ವಿನಾಯಿತಿ ;

(iv) ಭತ್ತಕ್ಕೆ ತೆರಿಗೆ ವಿನಾಯಿತಿ ;

(v) ಚೌಬೀನೆ, ಮರ, ಮತ್ತು ಸೌದೆಗಳಿಂದಲ್ಲದೆ ಇತರ ವಸ್ತುಗಳಿಂದ ತಯಾರಿಸಿದ ಹೊಗೆ ರಹಿತ ಇದ್ದಲಿಗೆ (ಕೋಕ್ ಮತ್ತು ಕಲ್ಲಿದ್ದಲನ್ನು ಬಿಟ್ಟು) ತೆರಿಗೆ ವಿನಾಯಿತಿ ;

(vi) ಮರಗೆಣಸು, ಮರಗೆಣಸಿನ ಉಪ್ಪೇರಿ, ಮರಗೆಣಸಿನ ಪುಡಿ ಮತ್ತು ಅದರ ಉತ್ಪನ್ನಗಳಿಗೆ ತೆರಿಗೆ ವಿನಾಯಿತಿ ;

(vii) ಅಂಗವಿಕಲರಿಗಾಗಿ ವಿನ್ಯಾಸಗೊಳಿಸಿದ ಕೈಯಿಂದ ನಡೆಸುವ ಮೂರು ಚಕ್ರದ ಸೈಕಲ್ಲಿಗೆ ತೆರಿಗೆ ವಿನಾಯಿತಿ ;

(viii) ಬಯೋಗಾಸ್ ಉತ್ಪಾದಕ ಮತ್ತು ಬಯೋಗ್ಯಾಸ್ ಎಂಜಿನುಗಳಿಗೆ ತೆರಿಗೆ ವಿನಾಯಿತಿ ;

(ix) ಕೋಳಿಯೂ ಸೇರಿದಂತೆ ಜಾನುವಾರುಗಳಿಗೆ ತೆರಿಗೆ ವಿನಾಯಿತಿ ;

(x) ಗಾಜಿನ ಚಿಮಣಿ, ಬಿರುಗಾಳಿ ಲಾಂದ್ರ, ಎಣ್ಣೆ ದೀಪಗಳು, ಒತ್ತಡರಹಿತ ಸೀಮೆಎಣ್ಣೆ ಬತ್ತಿ ಸ್ಟೌವ್‌ಗಳು ಮತ್ತು ಅವುಗಳ ಭಾಗಗಳಿಗೆ ತೆರಿಗೆ ವಿನಾಯಿತಿ ;

(xi) ಒಂದಕ್ಕೆ 50 ರೂಪಾಯಿಗಳಿಗಿಂತ ಜಾಸ್ತಿ ಬೆಲೆ ಇರದ ಗಣಿತದ ಮತ್ತು ರೇಖಾಚಿತ್ರ ಸಲಕರಣೆಗಳಿಗೆ ತೆರಿಗೆ ವಿನಾಯಿತಿ ;

(xii) ಹೋಟೆಲುದಾರರಿಗೆ 7-9-1978ರಿಂದ 2-2-1983ರ ಅವಧಿಯಲ್ಲಿ ಅವರು ಮಾಡಿದ ವ್ಯಾಪಾರದ ಮೇಲೆ ತೆರಿಗೆ ವಿನಾಯಿತಿ ;

(xiii) ಇಲೆಕ್ಟ್ರಾನಿಕ್ ಸರಕುಗಳ ಮೇಲೆ (ಕಂಪ್ಯೂಟರೂ ಸೇರಿದಂತೆ) ತೆರಿಗೆಯು ಮೂಲದರದಲ್ಲಿ ಶೇಕಡ 15 ರಿಂದ ಶೇಕಡ 6ಕ್ಕೆ ಇಳಿತಾಯ;

(xiv) ಪವರ್ ಟಿಲ್ಲರುಗಳ ಮೇಲೆ ತೆರಿಗೆ ದರದಲ್ಲಿ ಶೇಕಡ 7.2 ರಿಂದ ಶೇಕಡ 6ಕ್ಕೆ ಇಳಿತಾಯ;

(xv) ದ್ವಿಚಕ್ರ ಆಟೋಮೊಬೈಲುಗಳ ಮೂಲ ತೆರಿಗೆ ದರದಲ್ಲಿ ಶೇಕಡ 15 ರಿಂದ ಶೇಕಡ 12ಕ್ಕೆ ಇಳಿತಾಯ;

(xvi) ಡೀಸಲು ಇಂಜಿನು ಮತ್ತು ಅದರ ಭಾಗಗಳ ಮೇಲೆ ತೆರಿಗೆ ದರದಲ್ಲಿ ಶೇಕಡ 12 ರಿಂದ 10ಕ್ಕೆ ಇಳಿತಾಯ;

(xvii) ಸಿದ್ಧ ಉಡುಪುಗಳ ಮೇಲೆ ತೆರಿಗೆ ದರದಲ್ಲಿ ಶೇಕಡ 7.2 ರಿಂದ ಶೇಕಡ 4ಕ್ಕೆ ಇಳಿತಾಯ ಮತ್ತು 50 ರೂಪಾಯಿ ಬೆಲೆಯ ಉಡುಪಿನ ಮೇಲೆ ಈಗಿರುವ ತೆರಿಗೆ ವಿನಾಯಿತಿಯನ್ನು ತೆಗೆದುಹಾಕುವುದು;

(xviii) ಗಡಿಯಾರ, ಟೈಂಪೀಸುಗಳು ಮತ್ತು ಕೈಗಡಿಯಾರ ಮತ್ತು ಅವುಗಳ ಭಾಗಗಳ ಮೇಲಿನ ತೆರಿಗೆಯಲ್ಲಿ ಶೇಕಡ 18 ರಿಂದ ಶೇಕಡ 12ಕ್ಕೆ ಇಳಿತಾಯ;

(xix) ಏಲಕ್ಕಿಯು ಮೇಲಿನ ಮೂಲ ತೆರಿಗೆ ದರದಲ್ಲಿ ಶೇಕಡ 4 ರಿಂದ 3ಕ್ಕೆ ಇಳಿತಾಯ;

(xx) 9 ಎಚ್. ಪಿ. (900 ಸಿ. ಸಿ.) ಗಿಂತಲೂ ಕಡಿಮೆ ಎಚ್.ಪಿ.ಯ ಕಾರುಗಳ ಮೇಲಿನ ತೆರಿಗೆ ದರದಲ್ಲಿ ಶೇಕಡ 12 ರಿಂದ ಶೇಕಡ 6ಕ್ಕೆ ಇಳಿತಾಯ;

(xxi) 10ಲಕ್ಷ ಮತ್ತು 25 ಲಕ್ಷ ರೂಪಾಯಿ ನಡುವೆ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರಿಂದ ಕೈಯಲ್ಲಿ ತಯಾರಿಸಿದ ಬಟ್ಟೆ ಸೋಪುಗಳ ಮೇಲೆ ಸಂದಾಯವಾಗಬೇಕಾದ ಮೂಲ ತೆರಿಗೆ ದರದಲ್ಲಿ ಶೇಕಡ 8ರಿಂದ ಶೇಕಡ 6ಕ್ಕೆ ಇಳಿತಾಯ ಮತ್ತು;

(xxii) ನೋಂದಣಿ ಮಾಡುವ ಹೊಣೆಗಾರಿಕೆಗೆ ಈಗ ಇರುವ ವಾರ್ಷಿಕ ವಹಿವಾಟಿನ ಮಟ್ಟವನ್ನು 50,000 ದಿಂದ 75,000ಕ್ಕೆ ಏರಿಸುವುದು

(xxiii) ಮಂಡಕ್ಕಿ (ಪುರಿ) ಖರೀದಿ ಮೇಲೆ ಹಾಕುತ್ತಿದ್ದ ಖರೀದಿ ತೆರಿಗೆ ವಿನಾಯಿತಿ;

(xxiv) ಸುಗಂಧ ಸುಫಾರಿ ಮೇಲೆ ಸಂದಾಯ ಮಾಡಬೇಕಾದ ಮಾರಾಟ ತೆರಿಗೆಯಿಂದ ಅಡಿಕೆ ಮೇಲೆ ಸಂದಾಯ ಮಾಡಿದ ಮಾರಾಟ ತೆರಿಗೆಯನ್ನು ವಜಾವಟ್ಟು ಮಾಡುವುದು.

67. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ 17(1)ನೇ ಪ್ರಕರಣದ ಮೇರೆಗೆ ಹೋಟೆಲುದಾರರಲ್ಲದ ವ್ಯಾಪಾರಿಗಳಿಗೆ ಉಪಬಂಧಿಸಿದ ಈಗಿರುವ ರಾಜಿ ವ್ಯವಸ್ಥೆಯನ್ನು 5 ಲಕ್ಷ ರೂಪಾಯಿಗಳವರೆಗೆ ವಹಿವಾಟು ಇರುವ ವ್ಯಾಪಾರಿಗಳಿಗೆ ವಿಸ್ತರಿಸಲು ನಾನು ಪ್ರಸ್ತಾವಿಸುತ್ತೇನೆ.

68. ಕ್ಷಿಪ್ರ ನಿರ್ಧರಣೆಗೆ ವಹಿವಾಟು ಮಿತಿಯನ್ನು 1.5 ಲಕ್ಷದಿಂದ 5 ಲಕ್ಷಕ್ಕೆ ಏರಿಸಲು ಪ್ರಸ್ತಾವಿಸುತ್ತೇನೆ, ವ್ಯಾಪಾರಿಗಳು ಈ ಸೌಲಭ್ಯವನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಈಗಿರುವ ಕಾರ್ಯವಿಧಾನವನ್ನು ಸರಳಗೊಳಿಸಲಾಗುವುದು.

69. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ವರದಿ ಸಲ್ಲಿಸಿದ ದಿನಾಂಕದಿಂದ ತೆರಿಗೆ ನಿರ್ಧರಣೆವರೆಗೆ 3 ವರ್ಷಗಳ ಸಮಯದ ಮಿತಿಯನ್ನು ನಿಗದಿ ಪಡಿಸಲು ನಾನು ಪ್ರಸ್ತಾವಿಸುತ್ತೇನೆ.

70. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ಮರು ಸಂದಾಯಕ್ಕೆ ಸಮಯದ ಮಿತಿಯನ್ನು ಮೂರು ತಿಂಗಳಿಗೆ ನಿಗದಿಪಡಿಸಲು ಮತ್ತು ವಿಳಂಬವಾದ ಮರು ಸಂದಾಯಕ್ಕೆ ವರ್ಷಕ್ಕೆ ಶೇಕಡಾ 9ರ ದರದಲ್ಲಿ ಬಡ್ಡಿ ಸಂದಾಯಕ್ಕೆ ಏರ್ಪಾಟು ಮಾಡಲೂ ನಾನು ಪ್ರಸ್ತಾವಿಸುತ್ತೇನೆ.

ಹೆಚ್ಚಿನ ಸಂಪನ್ಮೂಲಗಳಿಗೆ ಕ್ರಮಗಳು :

71. ಅನುಬಂಧ IVರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲೆ ಮೂಲ ಮಾರಾಟ ತೆರಿಗೆ ದರಗಳನ್ನು ಏರಿಸಲು ಪ್ರಸ್ತಾವಿಸುತ್ತೇನೆ.

72. ತೆರಿಗೆ ನಿರ್ಧರಣೆಯಲ್ಲಿ ವಸೌಲ್ಯ ಸೇರ್ಪಡೆಯ ದೃಷ್ಟಿಯಿಂದ ಅನುಬಂಧ Vರಲ್ಲಿ ಪಟ್ಟಿ ಮಾಡಿದ ಸರಕುಗಳ ಮೇಲೆ ಮೂಲ ಮಾರಾಟ ತೆರಿಗೆಯನ್ನು ಮೊದಲನೇ ಹಂತದಲ್ಲಿ ಶೇಕಡ 2ರಷ್ಟು ಕಡಿಮೆ ಮಾಡಿ ಅದನ್ನು ಕೊನೆಯ ಹಂತದಲ್ಲಿ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ. ಇದು ತೆರಿಗೆ ತಪ್ಪಿಸಿಕೊಳ್ಳುವುದನ್ನು ಸಹ ತಡೆಯುತ್ತದೆ.

73. ಈಗಿರುವ ವಹಿವಾಟು ತೆರಿಗೆ ದರದಲ್ಲಿ ಕೆಳಕಂಡ ಬದಲಾವಣೆಯನ್ನು ಪ್ರಸ್ತಾವಿಸಲಾಗಿದೆ.

(ಎ)	1 ಲಕ್ಷದಿಂದ ಐದು ಲಕ್ಷದ ನಡುವೆ ಇರುವ ವಹಿವಾಟು	ಇಲ್ಲ
(ಬಿ)	5 ಲಕ್ಷದಿಂದ 50 ಲಕ್ಷದ ನಡುವೆ ಇರುವ ವಹಿವಾಟು	ಶೇ. 0.5
(ಸಿ)	50 ಲಕ್ಷಕ್ಕೂ ಮೀರಿ ಇರುವ ವಹಿವಾಟಿಗೆ	ಶೇ. 1

74. ಈಗ, ವ್ಯಾಪಾರಿಗಳು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957, ಕರ್ನಾಟಕದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ ಅಧಿನಿಯಮ, 1979, ಕರ್ನಾಟಕ ವಿಲಾಸ ತೆರಿಗೆ (ಹೋಟೆಲು ಮತ್ತು ವಸತಿ ಗೃಹಗಳು) ಅಧಿನಿಯಮ, 1979 ಇವುಗಳ ಮೇರೆಗೆ ತಾವು ನೋಂದಾಯಿಸಿಕೊಳ್ಳಬೇಕೆಂದು ಅಗತ್ಯಪಡಿಸಲಾಗಿದೆ. ಈ ಹಲವಾರು ಬಗೆ ನೋಂದಣಿಗಳು ಇಲಾಖೆಗೆ ನಿವಾರಿಸಬಹುದಾಗಿದ್ದ ಕೆಲಸಗಳನ್ನು ಹೇರಿದೆ ಮತ್ತು ವ್ಯಾಪಾರಿಗಳಿಗೂ ಕಿರಿಕಿರಿಯುಂಟುಮಾಡಿದೆ. ಆದ್ದರಿಂದ ನಾನು ಈ ಅಧಿನಿಯಮಗಳೆಲ್ಲದರ ಮೇರೆಗೆ ವ್ಯಾಪಾರಿಗಳಿಗೆ ಒಂದೇ ನೋಂದಣಿಯನ್ನು ಪ್ರಸ್ತಾವಿಸುತ್ತೇನೆ. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಮೇರೆಗೆ ಸಂದಾಯ ಮಾಡಲು ಅಗತ್ಯಪಡಿಸಲಾದ ಈ ನೋಂದಣಿ ಫೀಜನ್ನು ವರ್ಷಕ್ಕೆ ಈಗಿರುವ 200 ರೂಪಾಯಿಗಳಿಂದ 250 ರೂಪಾಯಿಗಳಿಗೆ ಏರಿಸಲು ಪ್ರಸ್ತಾವಿಸುತ್ತೇನೆ.

75. ಕಾಮಗಾರಿ ಕಂಟ್ರಾಕ್ಟುಗಳು, ಕಂತು ಖರೀದಿ ಮತ್ತು ಗುತ್ತಿಗೆಗಳಿಂದ ಉಂಟಾಗುವ ಸ್ವತ್ತು ವರ್ಗಾವಣೆ ಮೇಲೆ ಮಾರಾಟ ತೆರಿಗೆ ವಿಧಿಸಲು ಪ್ರಸ್ತಾವಿಸುತ್ತೇನೆ. ಅವಶ್ಯ ಶಾಸನವನ್ನು ಸದನದ ಮುಂದೆ ಮಂಡಿಸಲಾಗುವುದು.

76. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮವನ್ನು ಮತ್ತಷ್ಟು ಏಕರೂಪಗೊಳಿಸಲು ಮತ್ತು ಅದರ ಆಡಳಿತವನ್ನು ಸುಧಾರಿಸಲು ನಾನು ಪ್ರಸ್ತಾವಿಸುವ ಇತರ ಕೆಲವು ಕ್ರಮಗಳು ಹೀಗಿವೆ—

(I) ವಿವಿಧ ಹಂತದ ದರದಲ್ಲಿ ಈಗ ತೆರಿಗೆ ವಿಧಿಸಲಾಗುತ್ತಿರುವ ಅನುಬಂಧ VI ರಲ್ಲಿ ಪಟ್ಟಿ ಮಾಡಿದ ಕೆಲವು ಸರಕುಗಳ ಮೇಲೆ ಏಕ ಹಂತದಲ್ಲಿ ತೆರಿಗೆ ವಿಧಿಸುವುದು.

(II) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಮೇರೆಗೆ ತೆರಿಗೆ ನಿರ್ಧರಣೆ ಪುನಃ ಪ್ರಾರಂಭಿಸುವುದಕ್ಕೆ ಈಗಿರುವ 5 ವರ್ಷಗಳ ಕಾಲ ಪರಿಮಿತಿಯನ್ನು, 10 ವರ್ಷಕ್ಕೆ ಏರಿಸಲಾಗುವುದು.

(III) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಕೆಲವು ಉಪಬಂಧಗಳನ್ನು

(ಎ) ಈ ಅಧಿನಿಯಮದ ಮೇರೆಗೆ ತೆರಿಗೆ ವಿಧಿಸಬಹುದಾದ ಸರಕುಗಳಿಗೆ ಅನ್ವಯಿಸುವ ತೆರಿಗೆ ದರಗಳ ಸಂಬಂಧದಲ್ಲಿ ಬದ್ಧಗೊಳಿಸುವ ಸ್ವರೂಪದ ಸ್ಪಷ್ಟೀಕರಣ ಹೊರಡಿಸಲು ವಾಣಿಜ್ಯ ತೆರಿಗೆ ಕಮೀಷನರನ್ನು ಅಧಿಕಾರವುಳ್ಳವರನ್ನಾಗಿಸಲು,

(ಬಿ) ತರುವಾಯದ ತೆರಿಗೆ ನಿರ್ಧರಣೆ ವರ್ಷಗಳಲ್ಲಿ ಬೆಲೆ ಬದಲಾವಣೆ ಅಥವಾ ಪರಿಷ್ಕರಣೆ ಕಾರಣದಿಂದಾಗಿ ಸ್ವೀಕರಿಸಿದ ಮೊಬಲಗುಗಳಿಗೆ ಸಂಬಂಧಿಸಿದ ವಹಿವಾಟುಗಳ ತೆರಿಗೆ ನಿರ್ಧರಣೆಗಾಗಿ, ಮತ್ತು

(ಸಿ) ಈಗಿರುವಂತೆ ಮುಂಗಡ ತೆರಿಗೆಯನ್ನು ಪ್ರತಿ ತಿಂಗಳು 25ನೇ ತಾರೀಖಿಗೆ ಸಂದಾಯ ಮಾಡುವುದಕ್ಕೆ ಬದಲಾಗಿ 20ನೇ ತಾರೀಖಿಗೆ ಸಂದಾಯ ಮಾಡುವುದಕ್ಕಾಗಿ,—

ತಿದ್ದುಪಡಿ ಮಾಡಲಾಗುವುದು.

77. ಮೂಲ ಮಾರಾಟ ತೆರಿಗೆಯ ಮೇಲೆ ಶೇ. 10ರ ದರದಲ್ಲಿ ಅಭಿವೃದ್ಧಿ ಉಪಕರವನ್ನು ವಿಧಿಸಲು ನಾನು ಪ್ರಸ್ತಾವಿಸಿದ್ದೇನೆ. ಈಗಿರುವ ಅಧಿಭಾರ ಮತ್ತು ಗ್ರಾಮೀಣ ಅಭಿವೃದ್ಧಿ ಉಪಕರ ಮತ್ತು ಪ್ರಸ್ತಾವಿತ ಅಭಿವೃದ್ಧಿ ಉಪಕರವೆಲ್ಲವನ್ನೂ ಒಟ್ಟುಗೂಡಿಸಿ 'ಅಭಿವೃದ್ಧಿ ಉಪಕರ' ಎಂದು ಕರೆಯಲಾಗುವುದು.

ಪ್ರವೇಶ ತೆರಿಗೆ

78. ಈ ಮುಂದಿನ ರಿಯಾಯಿತಿಗಳು ಮತ್ತು ಪರಿಹಾರಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ :—

(ಎ) 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ನೋಂದಣಿಗೆ ಗೊತ್ತುಪಡಿಸಲಾದ ವಹಿವಾಟು ಮಿತಿಯನ್ನು ಪ್ರವೇಶ ತೆರಿಗೆ ಅಧಿನಿಯಮದ ಮೇರೆಗಿನ ನೋಂದಣಿ ಉದ್ದೇಶಗಳಿಗಾಗಿ ಅಳವಡಿಸಿಕೊಳ್ಳತಕ್ಕದು ;

(ಬಿ) 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ನೋಂದಾಯಿಸಿಕೊಂಡ ವ್ಯಾಪಾರಿಗಳನ್ನು ಪ್ರವೇಶ ತೆರಿಗೆ ಅಧಿನಿಯಮದ ಮೇರೆಗೆ ನೋಂದಣಿ/ನವೀಕರಣ ಶುಲ್ಕ ಸಂದಾಯ ಮಾಡುವುದರಿಂದ ವಿನಾಯಿತಿಗೊಳಿಸಲಾಗಿದೆ ;

(ಸಿ) 5 ಲಕ್ಷ ರೂಪಾಯಿವರೆಗಿನ ವಹಿವಾಟು ಇದ್ದ ವ್ಯಾಪಾರಿಗಳಿಗೆ ಕ್ಷಿಪ್ರ ಕರ ನಿರ್ಧಾರಣೆ ;

(ಡಿ) ಪ್ರವೇಶ ತೆರಿಗೆ ಸಂದಾಯ ಮಾಡಲು ಬದ್ಧರಲ್ಲದ ವ್ಯಾಪಾರಿಗಳಿಗೆ ಮಾಸಿಕ ವಿವರಪತ್ರ ಸಲ್ಲಿಸುವುದರಿಂದ ವಿನಾಯಿತಿ.

79. ಜವಳಿ ಮತ್ತು ಲೆವಿಯಿಲ್ಲದ ಸಕ್ಕರೆಯ ಮೇಲಿನ ತೆರಿಗೆ ದರವನ್ನು ಶೇಕಡ 1 ರಿಂದ ಶೇಕಡ 2ಕ್ಕೆ ಏರಿಸಲು ನಾನು ಪ್ರಸ್ತಾಪಿಸಿದ್ದೇನೆ.

ವೃತ್ತಿ ತೆರಿಗೆ

80. (i) ಅನುಬಂಧ VII ರಲ್ಲಿ ಪಟ್ಟಿಮಾಡಲಾದ ವ್ಯಾಪಾರಸಂಸ್ಥೆಗಳು ಮತ್ತು ಸಂಸ್ಥೆಗಳನ್ನು ವೃತ್ತಿ ತೆರಿಗೆ ಅಧಿನಿಯಮದ ಅನುಸೂಚಿಗೆ ಸೇರಿಸಲು ಮತ್ತು ಈ ಅನುಬಂಧದಲ್ಲಿ ಸೂಚಿಸಿರುವ ದರಗಳಲ್ಲಿ ಈ ತೆರಿಗೆಯನ್ನು ವಿಧಿಸಲು ನಾನು ಪ್ರಸ್ತಾಪಿಸಿದ್ದೇನೆ.

(ii) 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ವಾರ್ಷಿಕ ವಹಿವಾಟು 75,000 ರೂ.ಗಳಿಗಿಂತ ಕಡಿಮೆಯಿರುವ ವ್ಯಾಪಾರಿಗಳನ್ನು ವೃತ್ತಿ ತೆರಿಗೆಯಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾಪಿಸಿದ್ದೇನೆ.

(iii) ಮಾಸಿಕ 1200 ರೂ.ಗಳಿಗಿಂತ ಕಡಿಮೆ ಮೂಲವೇತನ/ಮಜೂರಿಯನ್ನು ಪಡೆಯುವ ವೇತನದಾರರು/ಮಜೂರಿದಾರರನ್ನು ವೃತ್ತಿ ತೆರಿಗೆ ಸಂದಾಯದಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾಪಿಸಿದ್ದೇನೆ.

ವಿಲಾಸ ತೆರಿಗೆ

81. ಪ್ರಸ್ತುತ ಇರುವ ದರಗಳಲ್ಲಿ ಈ ಮುಂದಿನ ಬದಲಾವಣೆಗಳನ್ನು ಮಾಡಲು ನಾನು ಪ್ರಸ್ತಾಪಿಸಿದ್ದೇನೆ

(ಎ) ಪ್ರತಿ ದಿನಕ್ಕೆ ಪ್ರತಿ ಕೊಠಡಿಗೆ ವಸತಿ ದರ 50 ರೂ. ಗಿಂತ ಹೆಚ್ಚು ಆದರೆ 150 ರೂ.ಗಳಿಗಿಂತ ಕಡಿಮೆ ಇದ್ದರೆ—ಶೇಕಡ 10.

(ಬಿ) ಪ್ರತಿ ದಿನಕ್ಕೆ ಪ್ರತಿ ಕೊಠಡಿಗೆ ವಸತಿ ದರ 150 ರೂ.ಗಿಂತ ಹೆಚ್ಚು ಆದರೆ 250 ರೂ. ಗಿಂತ ಕಡಿಮೆ ಇದ್ದರೆ—ಶೇಕಡ 15

(ಸಿ) ಪ್ರತಿ ದಿನಕ್ಕೆ ಪ್ರತಿ ಕೊಠಡಿಗೆ ವಸತಿ ದರ 250 ರೂ.ಗಿಂತ ಕಡಿಮೆ ಯಿಲ್ಲದಿದ್ದರೆ—ಶೇಕಡ 20.

ಮನರಂಜನಾ ತೆರಿಗೆ

82. ವಿಡಿಯೋ ಪ್ರದರ್ಶನಗಳ ಮೇಲಿನ ತೆರಿಗೆಯನ್ನು ತಿಂಗಳಿಗೆ 100 ರೂ. ಗಳಿಂದ 1,000 ರೂ. ಗಳಿಗೆ ಏರಿಸಲು ಪ್ರಸ್ತಾಪಿಸಲಾಗಿದೆ.

ಕೃಷಿ ವರಮಾನ ತೆರಿಗೆ

83. ಪ್ಲಾಂಟೇಷನ್ ಬೆಳೆಗಳ ವರಮಾನದ ಮೇಲೆ ಈಗ ವಿಧಿಸಿರುವ ಕೃಷಿ ವರಮಾನ ತೆರಿಗೆ ಲೆವಿಯಿಂದ ಉದ್ಭವಿಸುವ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಅಧ್ಯಯನ ಮಾಡಲು ರಾಜ್ಯ ಅರಣ್ಯ ಸಚಿವರಾದ ಮಾನ್ಯ ಶ್ರೀ ಬಿ. ಎ. ಜೀವಿಜಯ ಅವರ ಅಧ್ಯಕ್ಷತೆಯಲ್ಲಿ ಸರ್ಕಾರ ಸಮಿತಿಯೊಂದನ್ನು ನೇಮಕಮಾಡಿತ್ತು. ಈ

ಸಮಿತಿಯು ಇತ್ತೀಚೆಗೆ ತನ್ನ ವರದಿಯನ್ನು ಸಲ್ಲಿಸಿದೆ. ಸಮಿತಿಯ ಶಿಫಾರಸುಗಳನ್ನು ಸರ್ಕಾರ ಪರಿಶೀಲಿಸಿದೆ. ಈ ಶಿಫಾರಸುಗಳ ಬಗೆಗಿನ ಸರ್ಕಾರದ ನಿರ್ಣಯಗಳು ಈ ಕೆಳಗಿನಂತಿವೆ.

(ಎ) ಕೃಷಿ ವರಮಾನ ತೆರಿಗೆಯ ಉದ್ದೇಶಕ್ಕಾಗಿ ನಿಗಮಿತ ಮತ್ತು ನಿಗಮಿತ ವಲ್ಲದ ವಲಯಗಳನ್ನು ಪ್ರತ್ಯೇಕವಾಗಿ ಪರಿಗಣಿಸಬೇಕು.

(ಬಿ) ನಿಗಮಿತವಲ್ಲದ ವಲಯಕ್ಕಾಗಿನ ಮೂಲಭೂತ ವಿನಾಯಿತಿ ಮಿತಿಯನ್ನು ಈಗಿರುವ 14,000 ರೂ. ಗಳಿಂದ 20,000 ರೂ. ಗಳಿಗೆ ಏರಿಸಲಾಗುವುದು. ನಿಗಮಿತವಲ್ಲದ ವಲಯಕ್ಕೆ ಗರಿಷ್ಠ ತೆರಿಗೆ ದರವನ್ನು ಈಗಿರುವ ಶೇಕಡಾ 65 ರಿಂದ ಶೇಕಡ 50ಕ್ಕೆ ಇಳಿಸಲಾಗುವುದು. ನಿಗಮಿತವಲ್ಲದ ವಲಯಕ್ಕೆ ಸಂಬಂಧಿಸಿದ ಹೊಸ ತೆರಿಗೆ ಶ್ರೇಣಿಗಳು ಮತ್ತು ದರಗಳು ಅನುಬಂಧ–VIIIರಲ್ಲಿ ಕೊಟ್ಟಿರುವಂತೆ ಇವೆ.

(ಸಿ) ನಿಗಮಿತ ವಲಯಕ್ಕೆ ಮೂಲ ಭೂತ ವಿನಾಯಿತಿಯನ್ನು ಈಗಿರುವ 14,000 ರೂಪಾಯಿಗಳಿಂದ 20,000 ರೂಪಾಯಿಗಳಿಗೆ ಏರಿಸಲಾಗಿದೆ ನಿಗಮಿತ ವಲಯಕ್ಕೆ ಕೊಟ್ಟಿರುವ ಹೊಸ ತೆರಿಗೆ ಶ್ರೇಣಿಗಳು ಮತ್ತು ದರಗಳು IXನೇ ಅನುಬಂಧದಲ್ಲಿ ಕೊಟ್ಟಿರುವಂತೆ ಇವೆ.

(ಡಿ) 25 ಎಕರೆಗಳವರೆಗೆ ಜಮೀನು ಹಿಡುವಳಿಗಳನ್ನು ಹೊಂದಿರುವ ಸಣ್ಣ ಕಾಫಿ ಬೆಳೆಗಾರರಿಗೆ ಅನುಬಂಧ Xರಲ್ಲಿ ಕೊಟ್ಟಿರುವಂತೆ ರಾಜಿ ಯೋಜನಾ ಸೌಲಭ್ಯವನ್ನು ಒದಗಿಸಲಾಗುವುದು.

(ಇ) ಕರ ನಿರ್ಧಾರಣೆಗೊಳಪಡುವವರು ಪ್ರಸ್ತುತ ಈ ಅಧಿನಿಯಮದ ಮೇರೆಗೆ ಗೊತ್ತುಪಡಿಸಲಾಗಿರುವ ಶೇಕಡ 12ರಷ್ಟು ಮಿತಿಗೆ ಬದಲಾಗಿ ತಮ್ಮ ಸಾಲಗಳ ಮೇಲೆ ಸಂದಾಯ ಮಾಡುವ ಬಡ್ಡಿ ದರದ ಸಂಬಂಧದಲ್ಲಿ ಅವರು ಸಂದಾಯ ಮಾಡುವ ವಾಸ್ತವಿಕ ಬಡ್ಡಿ ಅಥವಾ ಷೆಡ್ಯೂಲ್ ಬ್ಯಾಂಕುಗಳಿಗೆ ಅವರು ಸಂದಾಯ ಮಾಡುವ ಬಡ್ಡಿ– ಇವೆರಡರಲ್ಲಿ ಯಾವುದು ಕಡಿಮೆಯೋ ಆ ಬಡ್ಡಿಯನ್ನು ಕಳೆಯಲು ಅವಕಾಶ ಕೊಡಲಾಗುವುದು ;

(ಎಫ್) ಕಾಫಿ ಪ್ಲಾಂಟೇಷನ್ನುಗಳ ಸಂಬಂಧದಲ್ಲಿ ಕರನಿರ್ಧಾರಣೆಗೆ ಒಳಪಡುವವರು ಕಂತು ಖರೀದಿ ಆಧಾರದ ಮೇಲೆ ಬಳಸುವ ಯಂತ್ರೋಪಕರಣಗಳಿಗೆ ಇಳಿವರಿ ಭತ್ಯವನ್ನು ನೀಡಲಾಗುವುದು.

(ಜಿ) ಬೆಳೆದ ಮತ್ತು ಕಾಫೀ ಮಂಡಲಿಗೆ ಸರಬರಾಜು ಮಾಡಿದ ಪ್ರತಿ 50 ಕೆ.ಜಿ. ಕಾಫಿ ಬೆಳೆಗೆ ಪುನಃ ಸಸಿ ನೆಡುವ ಭತ್ಯವನ್ನು 12.50 ರೂ. ಗಳಿಂದ 25 ರೂ. ಗಳಿಗೆ ಏರಿಸಲಾಗುವುದು. ಅಧಿಕ ಉತ್ಪನ್ನವನ್ನು ಪ್ರೋತ್ಸಾಹಿಸುವ ಸಲುವಾಗಿ 600 ಕೆ.ಜಿ. ಗಿಂತ ಹೆಚ್ಚಿಗೆಯಾಗಿ ಬೆಳೆದ ಮತ್ತು ಕಾಫಿ ಮಂಡಲಿಗೆ ಸರಬರಾಜು ಮಾಡಿದ ಪ್ರತಿ 50 ಕೆ. ಜಿ. ಕಾಫಿಗೆ ಪುನಃ ಸಸಿ ನೆಡುವುದಕ್ಕಾಗಿ 30 ರೂ.ಗಳಷ್ಟು ಏರಿಸಿದ ದರದಲ್ಲಿ ಭತ್ಯವನ್ನು ಅನುಮತಿಸಲಾಗುವುದು.

1,000 ರೂಪಾಯಿಯಂತೆ ಮೋಟಾರು ವಾಹನಗಳ ತೆರಿಗೆಯನ್ನು ವಿಧಿಸಲು ಪ್ರಸ್ತಾವಿಸುತ್ತಿದ್ದೇನೆ.

(III) ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಸಂದಾಯ ಮಾಡತಕ್ಕ ಫೀಜನ್ನು ಹೆಚ್ಚಿಸಲು ಪ್ರಸ್ತಾವಿಸುತ್ತೇನೆ.

(IV) ಶಾಲಾ ಮಕ್ಕಳನ್ನು ಕರೆತರುವುದಕ್ಕಾಗಿ ಶಾಲೆಗಳು ತಾವು ಓಡಿಸುವ ಓಮ್ನಿ ಬಸ್‌ಗಳಿಗೆ ಸಂಬಂಧಪಡುವಂತೆ ಪ್ರತಿ ಆಸನಕ್ಕೆ ತ್ರೈಮಾಸಿಕ ವಾಗಿ 120 ರೂಪಾಯಿಯನ್ನು ಸಂದಾಯ ಮಾಡುವುದಕ್ಕೆ ಬದಲಾಗಿ ಮೋಟಾರು ವಾಹನ ತೆರಿಗೆಯನ್ನು ಪ್ರತಿ ವರ್ಷಕ್ಕೆ ಪ್ರತಿ ಓಮ್ನಿಬಸ್‌ಗೆ 500 ರೂ.ಗೆ ಇಳಿಸಲು ಪ್ರಸ್ತಾವಿಸುತ್ತೇನೆ.

ಸ್ಟಾಂಪ್ ಮತ್ತು ನೋಂದಣಿ

86. ಈಗಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಮತ್ತು ಉತ್ತಮ ರೀತಿ ಯಲ್ಲಿ ಜಾರಿಗೊಳಿಸುವ ಮೂಲಕ ಮತ್ತು ವಾಡಿಕೆ ವಿರಿಕೆಯ ಮೂಲಕ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ಮೂಲದಿಂದ ಹೆಚ್ಚಿಗೆಯಾಗಿ 10 ಕೋಟಿ ರೂಪಾಯಿ ಸಂಗ್ರಹವಾಗಲಿದೆ ಎಂದು ನಿರೀಕ್ಷಿಸಿದ್ದೇನೆ. ರಾಜ್ಯದಲ್ಲಿರುವ ಸಬ್‌ರಿಜಿಸ್ಟ್ರಾರರ ಕಚೇರಿಗಳಿಗೆ ಫೋಟೋ ಕಾಪಿಯರ್ (ಪ್ರತಿ ತಯಾರಿಸುವ ಯಂತ್ರ)ಗಳನ್ನು ಒದಗಿಸಲಾಗುವುದು.

87. ಮೇಲೆ ಪ್ರಸ್ತಾವಿಸಿದ ಎಲ್ಲ ಹೊಸ ಕ್ರಮಗಳು 1-8-1985 ರಿಂದ ಜಾರಿಗೆ ಬರುತ್ತವೆ.

1984-85ರ ಪರಿಷ್ಕೃತ ಅಂದಾಜುಗಳು :

88. 48.52 ಕೋಟಿ ರೂಪಾಯಿಗಳಷ್ಟು ತೆರಿಗೆ ಆದಾಯದಲ್ಲಿ ಹೆಚ್ಚಳ ಹಾಗೂ ಕೇಂದ್ರ ತೆರಿಗೆಗಳ ಪಾಲು, 18.23 ಕೋಟಿ ರೂಪಾಯಿ ತೆರಿಗೇತರ ರಾಜಸ್ವ ಮತ್ತು 32.67 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಸಹಾಯಾನುದಾನ ಮತ್ತು ಅಬಕಾರಿ ಶುಲ್ಕದ ಪಾಲು— ಇವುಗಳಿಂದಾಗಿ ರಾಜಸ್ವ ಜಮೆಗಳಲ್ಲಿ 99.42 ಕೋಟಿ ರೂಪಾಯಿಯಷ್ಟು ಹೆಚ್ಚಳವುಂಟಾಗಿದೆ. ತುಟ್ಟಿಭತ್ಯದ ವೆಚ್ಚದಲ್ಲಿ ಹೆಚ್ಚಳ, ಕೆಲವು ವಲಯಗಳಲ್ಲಿಯ ಅನಿವಾರ್ಯ ಹೊಣೆಗಾರಿಕೆಯಿಂದಾಗಿ ಯೋಜನಾ ವೆಚ್ಚದಲ್ಲಿ ಹೆಚ್ಚಳ ಮತ್ತು ಚುನಾವಣೆಗಳ ಮೇಲಿನ ವೆಚ್ಚ — ಇವುಗಳಿಂದಾಗಿ ರಾಜಸ್ವ ವೆಚ್ಚದಲ್ಲಿ 170.76 ಕೋಟಿ ರೂಪಾಯಿಯಷ್ಟು ಹೆಚ್ಚಳವುಂಟಾಗಿದೆ. ಕೆಲವು ವಲಯಗಳಲ್ಲಿ ಉಂಟಾದ ಉಳಿತಾಯದಿಂದಾಗಿ ಬಂಡವಾಳ ವೆಚ್ಚ 309 ಕೋಟಿ ರೂಪಾಯಿಯಿಂದ 285.91 ಕೋಟಿ ರೂಪಾಯಿಗೆ ಇಳಿದಿದೆ. ಮಾರುಕಟ್ಟೆ ಸಾಲಗಳ ಲಭ್ಯತೆಯಲ್ಲಿ ಹೆಚ್ಚಳ, ಹೆಚ್ಚುವರಿ ಯೋಜನಾ ಸಹಾಯ, ವಿದೇಶೀ ನೆರವಿನ ಯೋಜನೆಗಳಿಗಾಗಿ ಹೆಚ್ಚುವರಿ ಸಹಾಯಧನ ಪಡೆಯುವಿಕೆ ಮತ್ತು ಸಣ್ಣ ಉಳಿತಾಯಗಳ—ಸಂಗ್ರಹಣೆ ಯಲ್ಲಿ ಅಸಾಧಾರಣವಾದ ಉತ್ತಮ ನಿರ್ವಹಣೆ—ಇವುಗಳಿಂದಾಗಿ ಸರ್ಕಾರಿ ಸಾಲದ ಮೂಲಕ 220.58 ಕೋಟಿ ರೂಪಾಯಿ ಹೆಚ್ಚುವರಿ ಹಣ ದೊರೆತಿದೆ. ಸಾಲಗಳ

(ಹೆಚ್) ಕರ ನಿರ್ಧಾರಣೆಗೆ ಒಳಪಡುವವರು ಪಾಲುದಾರಿಕೆ ವ್ಯಾಪಾರ ಸಂಸ್ಥೆಗಳ ನೋಂದಣಿ ಮತ್ತು ನೋಂದಣಿಯ ನವೀಕರಣೆಗಾಗಿ ಸಲ್ಲಿಸುವ ನಿಯಮಿತ ನಮೂನೆಯಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಲು ಅನುಮತಿಸಲಾಗುವುದು ಮತ್ತು ಅವಕಾಶ ಕೊಡಲಾಗುವುದು ಮತ್ತು ಅಧಿಕಾರಪತ್ರವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

(ಐ) ಕಾಫಿ ಪ್ಲಾಂಟೇಷನ್ನುಗಳಲ್ಲಿ ಬಳಸಲು ಹೊಸದಾಗಿ ಪಡೆದುಕೊಂಡ ಸ್ಥಿರಯಂತ್ರಗಳು ಮತ್ತು ಯಂತ್ರೋಪಕರಣದ ನಿರ್ದಿಷ್ಟ ಬಾಬುಗಳ ಮೇಲೆ ವಿನಿಯೋಗ ಭತ್ಯವನ್ನು ನೀಡಲಾಗುವುದು.

ಅಬ್ಕಾರಿ

84. ಅಬ್ಕಾರಿ ಆದಾಯದ ಸಂಬಂಧದಲ್ಲಿ, ಈ ಮುಂದಿನವುಗಳನ್ನು ಪ್ರಸ್ತಾವಿಸ ಬಯಸುತ್ತೇನೆ.

(I) ಭಾರತದಲ್ಲಿ ತಯಾರಿಸಿದ ಮದ್ಯಕ್ಕೆ ರಾಜ್ಯದಲ್ಲಿ ಸಂದಾಯ ಮಾಡಬೇಕಾದ ಲೀಟರ್ ಶುಲ್ಕವನ್ನು ಒಟ್ಟುಗಟ್ಟಲೆ ಪ್ರತಿ ಲೀಟರ್‌ಗೆ 5.35 ರೂಪಾಯಿಯಿಂದ 6–00 ರೂ.ಗೆ ಏರಿಸಲಾಗುವುದು.

(II) ಮದ್ಯಸಾರ ಆಧಾರಿತ ಕೈಗಾರಿಕೆಗಳಿಗೆ ನೀಡುವ ಗುಣಾಪಹೃತ ಮದ್ಯದ ಮೇಲಿನ ಅಬ್ಕಾರಿ ಶುಲ್ಕವನ್ನು ಒಟ್ಟುಗಟ್ಟಲೆ ಪ್ರತಿ ಲೀಟರಿಗೆ 50 ಪೈಸೆಯಿಂದ 2 ರೂ. ಗಳಿಗೆ ಏರಿಸಲಾಗುವುದು. ಅಂತೆಯೇ ಗುಣಾಪಹೃತ ಮದ್ಯದ ಮೇಲಿನ ರಫ್ತು ಶುಲ್ಕವನ್ನು ಒಟ್ಟುಗಟ್ಟಲೆ ಪ್ರತಿ ಲೀಟರಿಗೆ 3 ರೂ. ಗಳಿಗೆ ಏರಿಸಲಾಗಿದೆ, ಆದರೆ ಆಸ್ಪತ್ರೆಗಳು ಪ್ರಯೋಗಾಲಯಗಳು ಶಾಲೆಗಳು, ಮತ್ತು ನರ್ಸಿಂಗ್ ಹೋಂಗಳಿಗೆ ಸರಬರಾಜು ಮಾಡುವ ಗುಣಾಪಹೃತ ಮಧ್ಯಕ್ಕೆ ಅಬ್ಕಾರಿ ಶುಲ್ಕದಿಂದ ವಿನಾಯಿತಿ ನೀಡಲಾಗುವುದು.

(III) ಸಾರಾಯಿ ಮೇಲಿನ ಅಬಕಾರಿ ಶುಲ್ಕವನ್ನು ಒಟ್ಟುಗಟ್ಟಲೆ ಪ್ರತಿ ಲೀಟರಿಗೆ 4 ರೂಪಾಯಿಯಿಂದ ಒಟ್ಟುಗಟ್ಟಲೆ ಪ್ರತಿ ಲೀಟರಿಗೆ 6 ರೂಪಾಯಿಗೆ ಹೆಚ್ಚಿಸಲಾಗಿದೆ.

ಮೋಟಾರು ವಾಹನಗಳು

85. ಮೋಟಾರು ವಾಹನಗಳ ತೆರಿಗೆಗೆ ಸಂಬಂಧಿಸಿದಂತೆ

(I) ಅನುಬಂಧ IIರಲ್ಲಿ ನಮೂದಿಸಿರುವಂತೆ ವಿವಿಧ ವರ್ಗಗಳ ವಾಹನಗಳ ಮೇಲೆ ಮೋಟಾರು ವಾಹನ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾವಿಸಿದ್ದೇನೆ.

(II) ಟ್ರಾಕ್ಟರ್ ಟ್ರೈಲರ್ ಘಟಕಗಳ ಮತ್ತು ಡ್ರಿಲ್ಲಿಂಗ್ ರಿಗ್‌ಗಳ ಮೇಲೆ ಪ್ರತಿ ಟ್ರಾಕ್ಟರ್ ಟ್ರೈಲರ್ ಘಟಕಕ್ಕೆ ಪ್ರತಿ ವರ್ಷಕ್ಕೆ ಕ್ರಮವಾಗಿ 100 ರೂಪಾಯಿಯಂತೆ ಮತ್ತು ಪ್ರತಿ ರಿಗ್‌ಗೆ ಪ್ರತಿ ವರ್ಷಕ್ಕೆ

ಮತ್ತು ಮುಂಗಡಗಳ ಸಂಬಂಧದಲ್ಲಿ ಕರ್ನಾಟಕ ವಿದ್ಯುತ್ ನಿಗಮ ಮತ್ತು ಕರ್ನಾಟಕ ವಿದ್ಯುತ್ ಮಂಡಲಿಯಲ್ಲಿಯ ಆಂತರಿಕ ಸಂಪನ್ಮೂಲಗಳ ಕೊರತೆಯಿಂದಾಗಿ ಅವು ಹೆಚ್ಚಿನ ಸಾಲ ಪಡೆದ ಕಾರಣ ಜಮೆ ಮತ್ತು ಬಟವಾಡೆಗಳ ನಡುವಣ ಅಂತರವು 100.79 ಕೋಟಿ ರೂಪಾಯಿಯಿಂದ 156.21 ಕೋಟಿ ರೂಪಾಯಿಯಷ್ಟಾಗಿದೆ. ಮೇಲೆ ತಿಳಿಸಿದ ಎಲ್ಲ ಅಂಶಗಳ ಒಟ್ಟು ಫಲವಾಗಿ ವರ್ಷದಲ್ಲಿ ಬಜೆಟ್ ಅಂದಾಜಿನಲ್ಲಿ 149.72 ಕೋಟಿ ರೂಪಾಯಿಯ ಕೊರತೆಗೆ ಪ್ರತಿಯಾಗಿ ಒಟ್ಟಾರೆ 205.10 ಕೋಟಿ ರೂಪಾಯಿ ಒಟ್ಟು ಕೊರತೆಯಾಗುವುದೆಂದು ಅಂದಾಜು ಮಾಡಲಾಗಿದೆ. 77.11 ಕೋಟಿ ರೂಪಾಯಿ ಪ್ರಾರಂಭದ ಕೊರತೆಯೊಂದಿಗೆ ಅಂತ್ಯದ ಶಿಲ್ಕು (—) 282.21 ಕೋಟಿ ರೂಪಾಯಿ ಆಗಬೇಕಾಗಿತ್ತು. ವಾಸ್ತವವಾಗಿ ಈ ವರ್ಷ— 255.30 ಕೊರತೆಯೊಂದಿಗೆ ಮುಕ್ತಾಯವಾಗುತ್ತದೆ.

ಬಜೆಟ್ ಅಂದಾಜುಗಳು : 1985–86

89. 1009 ಕೋಟಿ ರೂ.ಗೆ ಹೋಲಿಸಲಾಗಿ ತೆರಿಗೆ ರಾಜಸ್ವ 1139.00 ಕೋಟಿ ರೂಪಾಯಿ ಎಂದು ನಿರೀಕ್ಷಿಸಲಾಗಿದೆ. ತೆರಿಗೇತರ ರಾಜಸ್ವವು 44.43 ಕೋಟಿಯಷ್ಟು ಹೆಚ್ಚಾಗುತ್ತದೆ. ಸಹಾಯಾನುದಾನ ಮತ್ತು ಅಂಶದಾನಗಳು 31.47 ಕೋಟಿ ರೂಪಾಯಿಯಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಒಟ್ಟು ಜಮೆಗಳು 205.99 ಕೋಟಿ ರೂಪಾಯಿಯಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ರಾಜಸ್ವ ಮತ್ತು ಬಂಡವಾಳ ಲೆಕ್ಕಗಳ ಒಟ್ಟು ವೆಚ್ಚ 115.13 ಕೋಟಿ ರೂಪಾಯಿಯಷ್ಟು ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. ಸರ್ಕಾರಿ ಸಾಲದಿಂದ 252.61 ಕೋಟಿ ರೂಪಾಯಿಯಷ್ಟು ಹೆಚ್ಚು ಹಣ ಬರಲಿದೆ.

90. ಈ ಎಲ್ಲ ಅಂಶಗಳ ಒಟ್ಟು ಫಲವಾಗಿ 1985–86ನೇ ವರ್ಷದ ಒಟ್ಟು ಕೊರತೆ 81.82 ಕೋಟಿ ರೂಪಾಯಿ. 282.21 ಕೋಟಿ ರೂಪಾಯಿ ಪ್ರಾರಂಭದ ಕೊರತೆಯೊಂದಿಗೆ 1985–86ರ ಅಂತ್ಯದ ಶಿಲ್ಕು (—) 364.03 ಕೋಟಿ ರೂಪಾಯಿ.

91. ಓವರ್ ಡ್ರಾಫ್ಟ್ ಸಂಬಂಧವಾಗಿ ಭಾರತ ಸರ್ಕಾರವು ಪ್ರಕಟಿಸಿದಂತೆ 221.26 ಕೋಟಿ ರೂಪಾಯಿ ಮಧ್ಯಮಾವಧಿ ಸಾಲವನ್ನು ಮತ್ತು (—) 255.30 ಕೋಟಿ ರೂಪಾಯಿಗಳ ಸಂಧಾರಿತ ಪ್ರಾರಂಭ ಶಿಲ್ಕಿನ ಲೆಕ್ಕಕ್ಕೆ ತೆಗೆದು ಕೊಂಡಲ್ಲಿ ಅಂತ್ಯದ ಶಿಲ್ಕು (—) 115.86 ಕೋಟಿ ರೂಪಾಯಿಯಾಗುವುದು. ಇದಕ್ಕೆ ಮಧ್ಯಕಾಲೀನ ಪರಿಹಾರದ ಮೇಲಿನ 8 ಕೋಟಿ ರೂಪಾಯಿ ವೆಚ್ಚವನ್ನು ಸೇರಿಸಬೇಕಾಗಿದ್ದು ಆದರಿಂದಾಗಿ ಒಟ್ಟು ಕೊರತೆ 123.86 ಕೋಟಿ ರೂಪಾಯಿ ಆಗುವುದು.

92. ಪ್ರಸಕ್ತ ವರ್ಷ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಗಾಗಿ ನಿವ್ವಳ ವಸೂಲಿ 50 ಕೋಟಿ ರೂಪಾಯಿಯಾಗುವುದು. ಇದರಿಂದಾಗಿ 1985–86ರ ಅಂತ್ಯದ ಕೊರತೆಯು 73.86 ಕೋಟಿ ರೂಪಾಯಿಯಾಗುವುದು.

93. ಈಗ ನಾನು 1985–86ನೇ ವರ್ಷದ ಬಜೆಟ್ ಅಂದಾಜುಗಳನ್ನು ಸದನದ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸುತ್ತೇನೆ.

ಬಜೆಟ್ ವಿಹಂಗವಂ ನೋಟ

(ಕೋಟಿ ರೂಪಾಯಿಗಳಲ್ಲಿ).

		ಬಜೆಟ್ ಅಂದಾಜುಗಳು 1984-85	ಪರಿಷ್ಕೃತ ಅಂದಾಜುಗಳು 1984-85	ಬಜೆಟ್ ಅಂದಾಜುಗಳು 1985-86
ಪ್ರಾರಂಭದ ಶಿಲ್ಕು		(—)119.89	(—)77.11	(—)282.21*
ಎ. ರಾಜಸ್ವ ಲೆಕ್ಕ				
I. ಜಮೆ:				
ರಾಜ್ಯ ತೆರಿಗೆ	..	890.00	941.40	1071.44
ಕೇಂದ್ರ ತೆರಿಗೆಗಳ ಪಾಲು	...	287.08	298.88	312.66
ಕೇಂದ್ರ ಸರ್ಕಾರದ ಅನುದಾನ	...	185.49	203.48	221.13
ತೆರಿಗೆಯ ಹೊರತಾದ ರಾಜಸ್ವ	...	344.77	363.00	407.43
ಒಟ್ಟು—ಎ I.		1707.34	1806.76	2012.66
II. ವೆಚ್ಚ:				
ಸಾಮಾಜಿಕ ಮತ್ತು ಸಾಮುದಾಯಿಕ ಸೇವೆ	...	616.98	639.42	734.88
ಆರ್ಥಿಕ ಸೇವೆಗಳು	...	565.17	614.48	634.39
ಸಾಮಾನ್ಯ ಸೇವೆಗಳು	...	488.22	596.22	587.12
ಸಹಾಯಾನುದಾನಗಳು ಮತ್ತು ಅಂಶದಾನಗಳು	...	62.97	54.00	59.64
ಒಟ್ಟು—ಎ II.		1733.34	1904.12	2016.03
ಎ. ರಾಜಸ್ವ ಲೆಕ್ಕ ಹೆಚ್ಚಳ (+) ಕೊರತೆ (—)		(—) 26.00	(—) 97.36	(—) 3.37

* ಲೆಕ್ಕ (—) 255.30

(ಕೋಟಿ ರೂಪಾಯಿಗಳಲ್ಲಿ.)

	ಬಜೆಟ್ ಅಂದಾಜುಗಳು 1984-85	ಪರಿಷ್ಕೃತ ಅಂದಾಜುಗಳು 1984-85	ಬಜೆಟ್ ಅಂದಾಜುಗಳು 1985-86
ಬಿ. ಬಂಡವಾಳ ಲೆಕ್ಕ			
I. ಜಮೆ :			
ಭಾರತ ಸರ್ಕಾರದಿಂದ ಸಾಲ	224.98	362.70	322.56
ಬಹಿರಂಗ ಮಾರುಕಟ್ಟೆ ಸಾಲಗಳು ಇತ್ಯಾದಿ	75.92	78.38	76.39
ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿಯಿಂದ ಪಡೆದ ಸಾಲ	24.27	25.25	19.66
ಸಾಲ ಮತ್ತು ಮುಂಗಡಗಳ ವಸೂಲಿ	90.54	72.38	131.04
ಸಾರ್ವಜನಿಕ ಲೆಕ್ಕ (ನಿವ್ವಳ) ಇತ್ಯಾದಿ	108.12	113.80	105.58
ಒಟ್ಟು-ಬಿ I :	523.83	652.51	655·23
II. ವಿತರಣೆಗಳು :			
ಬಂಡವಾಳ ವೆಚ್ಚ (ನಿವ್ವಳ)	309.13	285.92	288.88
ಕೇಂದ್ರ ಸಾಲಗಳ ಮರುಪಾವತಿ	99.38	199.13	130.82
ಬಹಿರಂಗ ಮಾರುಕಟ್ಟೆ ಸಾಲಗಳ ಮರುಪಾವತಿ, ಇತ್ಯಾದಿ	41.33	40.30	28.22
ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿಯಿಂದ ಪಡೆದ ಸಾಲಗಳ ಮರುಪಾವತಿ	6.38	6.31	6.97
ಸಾಲ ಮತ್ತು ಮುಂಗಡಗಳ ವಿತರಣೆ	191.33	228.59	278.79
ಒಟ್ಟು-ಬಿ. II :	647.55	760.25	733.68
ಬಿ. ಬಂಡವಾಳ ಲೆಕ್ಕ ಕೊರತೆ	(—)123.72	(—)107.74	(—) 78.45
ಸಿ. ಒಟ್ಟು ಹೆಚ್ಚಳ ಕೊರತೆ	(—)149.72	(—)205.10	(—) 81.82
ಡಿ. ಮುಕ್ತಾಯ ಶಿಲ್ಕು	(—)269.61	(—)282.21	(—)364.03 (+)221·26** (+) 26.91*** (—)115.86
ವಜಾ ...			
ಇ. ಅಧಿಕ ಸಂಪನ್ಮೂಲ ಸಂಗ್ರಹಣ ...			50.00
ಜಮಾ ...			
ಎಫ್. ತಾತ್ಕಾಲಿಕ ಪರಿಹಾರ ಸಂದಾಯದ ಕೊರತೆ			8.00
ಜಿ. ಒಟ್ಟು ಕೊರತೆ ...			(—) 73.86

** ಓವರ್ ಡ್ರಾಫ್ಟ್ ಮರುಸಂದಾಯಕ್ಕೆ ಕೇಂದ್ರ ಸರ್ಕಾರದಿಂದ ನಿರೀಕ್ಷಿಸಲಾದ ಮಧ್ಯಮಾವಧಿ ಸಾಲ

*** ಪ್ರಾರಂಭದ ಶಿಲ್ಕಿನಲ್ಲಿ ಕಡಿತ

ಅನುಬಂಧ-I

	ಯೋಜನಾ ಅವಧಿ		
	V	VI	VII
I. ತಲಾವಾರು ಯೋಜನಾ ಬಂಡವಾಳ ಹೂಡಿಕೆ (ರೂಪಾಯಿಗಳಂ)	291	726	893
II. ರಾಜ್ಯಗಳ ತಲಾವಾರು ಸ್ವಂತ ತೆರಿಗೆ ರಾಜಸ್ವ (ರೂಪಾಯಿಗಳು)	74.5	103.10	175.60
III. ರಾಜ್ಯ ಸಂಪನ್ಮೂಲಗಳಿಗೆ ಕೇಂದ್ರದ ನೆರವಿನ ಪ್ರಮಾಣ.	0.47	0.29	0.30

ಅನುಬಂಧ-II

20 ಅಂಶ ಕಾರ್ಯಕ್ರಮ

1984-85 ರಲ್ಲಿ ಕರ್ನಾಟಕದ ಸಾಧನೆ

ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ದೇಶದಲ್ಲಿ ಕರ್ನಾಟಕವು ಮೊದಲನೆಯದಾಗಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (ಎನ್‌ಆರ್‌ಇಪಿ)
ಅನುಸೂಚಿತ ಪಂಗಡಗಳ ಕಲ್ಯಾಣ.
ಕುಡಿಯುವ ನೀರು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ (ಐಆರ್‌ಡಿಪಿ) ಸಂಬಂಧದಲ್ಲಿ ದೇಶದಲ್ಲಿ ಕರ್ನಾಟಕವು ಎರಡನೆಯದು.

ಈ ಕೆಳಕಂಡ ಅಂಶಗಳಲ್ಲಿ ಕರ್ನಾಟಕದ ಸಾಧನೆಯನ್ನು ಬಹಳ ಉತ್ತಮವೆಂದು ವರ್ಗೀಕರಿಸಲಾಗಿದೆ:-

1) ಗ್ರಾಮೀಣ ಭೂರಹಿತರಿಗೆ ಉದ್ಯೋಗ ಖಾತರಿ ಕಾರ್ಯಕ್ರಮ (ಆರ್‌ಎಲ್‌ಇಜಿಪಿ)

2) **ಹೆಚ್ಚುವರಿ ಭೂಮಿಯ ಹಂಚಿಕೆ.**

3) ಅನುಸೂಚಿತ ಜಾತಿಗಳ ಕುಟುಂಬಗಳಿಗೆ ಆರ್ಥಿಕ ನೆರವು.

4) ಒದಗಿಸಿದ ಗೃಹ ನಿರ್ಮಾಣ ನೆರವು,

5) ಕೊಳಚೆ ಪ್ರದೇಶದ ಜನತೆಯನ್ನು ಒಳಗೊಳ್ಳುವುದು.

6) ಗ್ರಾಮಗಳ ವಿದ್ಯುದೀಕರಣ.

7) ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದು.

8) ಮರಗಳನ್ನು ನೆಡುವುದು.

9) ಗ್ರಾಮ ಮತ್ತು ಸಣ್ಣ ಪ್ರಮಾಣದ ಘಟಕಗಳ ಸ್ಥಾಪನೆ.

10) ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ಪ್ರಾರಂಭಿಸಿರುವುದು.

ಈ ಕೆಳಕಂಡ ಬಾಬುಗಳ ಸಂಬಂಧದಲ್ಲಿ ಸಾಧನೆಯು **ಸರಾಸರಿಗಿಂತ ಕಡಿಮೆಯಾಗಿದೆ.**

1) ಜೀತ ಕಾರ್ಮಿಕ.

2) ಮನೆ ನಿವೇಶನಗಳು.

3) ಆರ್ಥಿಕವಾಗಿ ದುರ್ಬಲವಾದ ವರ್ಗಗಳ ಮನೆಗಳು.

4) ಬಯೋಗ್ಯಾಸ್ ಸ್ಥಿರಯಂತ್ರಗಳು.

5) ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗಳು.

6) ಆರೋಗ್ಯ ಉಪ-ಕೇಂದ್ರಗಳು.

ಅನುಬಂಧ-III

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

1985-86ನೇ ಸಾಲಿಗಾಗಿ ಕೈಕೊಳ್ಳಬೇಕಾದ ಹೊಸ ಕಾಮಗಾರಿಗಳ ಕಾರ್ಯಕ್ರಮ

I ಕೊಳವೆ ನೀರು ಸರಬರಾಜು ಯೋಜನೆ:

1. ವಿಜಯಪುರಕ್ಕೆ ನೀರು ಸರಬರಾಜು
2. ಗೌರಿಬಿದನೂರಿಗೆ ,,
3. ಸಿರಾಕ್ಕೆ ,,
4. ವೈ.ಎನ್. ಹೊಸಕೋಟೆಗೆ ,,
5. ಪಾಂಡವಪುರಕ್ಕೆ ,,
6. ಸಕಲೇಶಪುರಕ್ಕೆ ,,
7. ಬೆಳ್ತಂಗಡಿಗೆ ,,
8. ಮೂಡಬಿದರೆಗೆ ,,
9. ಸುಳ್ಯಕ್ಕೆ ,,
10. ಅಲ್ನಾವರಕ್ಕೆ ,,
11. ಸಿದ್ದಾಪುರಕ್ಕೆ ,,
12. ಹುಕ್ಕೇರಿಗೆ ,,
13. ಸಂಕೇಶ್ವರಕ್ಕೆ ,,
14. ಮೊಳಕಾಲ್ಮೂರಿಗೆ ,,
15. ಹರಪನಹಳ್ಳಿಗೆ ,,
16. ಹಡಗಲಿಗೆ ,,
17. ಸಿಂಧನೂರಿಗೆ ,,
18. ದೇವದುರ್ಗಕ್ಕೆ ,,
19. ಕೊಟ್ಟೂರಿಗೆ ,,

II ನಗರ ನೀರು ಸರಬರಾಜು ಯೋಜನೆಗಳು

1. ಹುಬ್ಬಳ್ಳಿ-ಧಾರವಾಡ ಪೌರ ನಿಗಮಕ್ಕೆ ನೀರು ಸರಬರಾಜು
2. ದಾಂಡೇಲಿಗೆ ,,
3. ಸಿರ್ಸಿಗೆ ,,
4. ಭದ್ರಾವತಿಗೆ ,, (ಅನುಸೂಚಿತ ಪ್ರದೇಶ)

III ಮಂಡಲಿ ನೀರು ಸರಬರಾಜು ಯೋಜನೆಗಳು

1. ಬೀದರ್ ನಗರಕ್ಕೆ ನೀರು ಸರಬರಾಜು
2. ಮೈಸೂರು ಔದ್ಯಮಿಕ ಪ್ರದೇಶಕ್ಕೆ ನೀರು ಸರಬರಾಜು

ಅನುಬಂಧ—IV

ಕ್ರಮ ಸಂಖ್ಯೆ	ಸರಕುಗಳ ಹೆಸರು	ಪ್ರಸಕ್ತ ಮೂಲ ದರ	ಪ್ರಸ್ತಾವಿತ ಮೂಲ ದರ
		ಶೇಕಡ	ಶೇಕಡ
1.	ಶುದ್ಧೀಕರಿಸಿದ ಖಾದ್ಯ ತೈಲ	4	6
2.	ಎರಡನೆ ಅನುಸೂಚಿಯ 123 ಮತ್ತು 165ನೇ ನಮೂದುಗಳು ಮತ್ತು ಐದನೇ ಅನುಸೂಚಿಯ 28ನೇ ನಮೂದುಗಳಲ್ಲಿರುವುದನ್ನು ಹೊರತು ಪಡಿಸಿ ಇತರ ಎಲ್ಲ ರೀತಿಯ ಚರ್ಮದ ಸರಕುಗಳು.	8	10
3.	ಸೀಲು ಮಾಡಿದ ಕಂಟೈನರುಗಳಲ್ಲಿ ತುಂಬಿದ ಆಹಾರ ಮತ್ತು ಹಣ್ಣುಗಳೂ ಸೇರಿದಂತೆ ಟಿನ್ನಿನಲ್ಲಿ, ಡಬ್ಬಿಗಳಲ್ಲಿ ಮತ್ತು ಬಾಟಲುಗಳಲ್ಲಿ ತುಂಬಿದ ಆಹಾರ ಪದಾರ್ಥಗಳು ಮತ್ತು ಹಣ್ಣುಗಳು.	8	12
4.	ಸೀಲುಮಾಡಿದ ಕಂಟೈನರುಗಳಲ್ಲಿ ತುಂಬಿದ ಬೆಣ್ಣೆ, ತುಪ್ಪ ಮತ್ತು ಗಿಣ್ಣು.	6	12
5.	ಎರಡನೆ ಅನುಸೂಚಿಯ 118ನೇ ನಮೂದಿನಲ್ಲಿ ನಿರ್ದಿಷ್ಟಪಡಿಸಲಾದ ಕಂಟೈನರುಗಳು	4	6
6.	ಚರ್ಮದಿಂದ ತಯಾರಿಸಿದವುಗಳೂ ಸೇರಿದಂತೆ ಆದರೆ ಉಕ್ಕಿನ ಪೆಟ್ಟಿಗೆಗಳನ್ನು ಬಿಟ್ಟು ಸೂಟ್‌ಕೇಸುಗಳು, ಬ್ರೀಫ್‌ಕೇಸುಗಳು, ಅಟ್ಯಾಚ್ ಕೇಸುಗಳು ಮತ್ತು ಡಿಸ್‌ಪ್ಯಾಚ್ ಕೇಸುಗಳು.	6	12

ಅನುಬಂಧ–V

ಕ್ರಮ ಸಂಖ್ಯೆ	ಸರಕುಗಳ ಹೆಸರು	ಪ್ರಸ್ತಾವಿತ ದರ	ಲೆವಿಯಾಗು ಹಂತ
		ಶೇಕಡ	
1.	ಮೊಸಾಯಿಕ್ ಬಿಲ್ಲೆಗಳು ಮತ್ತು ಚೂರುಗಳು, ಸೆರಾಮಿಕ್ ಮತ್ತು ಗಾಜಿನ ಹೊಳಪುಳ್ಳ ನೆಲದ ಮತ್ತು ಗೋಡೆಯ ಬಿಲ್ಲೆಗಳು ಮತ್ತು ಜಾಯಿಂಟಿಂಗ್ ಪುಡಿ ಮತ್ತು ಸೀತು ಮಿಶ್ರಣ.	2	ರಾಜ್ಯದಲ್ಲಿ ಮಾರಾಟ ಮಾಡುವ ಕೊನೆಯ ವ್ಯಾಪಾರಿಯು ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುತ್ತಾನೆ.
2.	ಹೆಂಡ, ಸಾರಾಯಿ, ಫೆನ್ನಿ, ವೈನು ಮತ್ತು ಬೀರನ್ನು ಹೊರತುಪಡಿಸಿ ಬಾಟಲಿನಲ್ಲಿ ತುಂಬಿದ ಮದ್ಯವೂ ಸೇರಿದಂತೆ ಎಲ್ಲ ಮದ್ಯ.	2	,,
3.	ಡೀಸೆಲ್ ಇಂಜಿನ್ನುಗಳು, ಅದರ ಭಾಗಗಳು ಮತ್ತು ಬೇರಿಂಗುಗಳನ್ನು ಹೊರತುಪಡಿಸಿ ಮೋಟಾರು ವಾಹನಗಳ ಭಾಗಗಳು ಮತ್ತು ಬಿಡಿ ಭಾಗಗಳಾಗಿ ಸಾಮಾನ್ಯವಾಗಿ ಉಪಯೋಗಿಸುವ ವಸ್ತುಗಳು	2	,,
4.	ಪಂಕಗಳು ಮತ್ತು ವಿದ್ಯುತ್ ಬಲ್ಬುಗಳು ಮತ್ತು ಇತರ ಎಲ್ಲ ಭಾಗಗಳು ಮತ್ತು ಬಿಡಿ ಭಾಗಗಳೂ ಸೇರಿದಂತೆ, ಆದರೆ 10 ಅಶ್ವ ಶಕ್ತಿಗಿಂತ ಹೆಚ್ಚಿನ ವಿದ್ಯುತ್ ಮೋಟಾರುಗಳನ್ನುಳ್ಳ ಪಂಪ್ ಸೆಟ್ಟುಗಳನ್ನು ಹೊರತುಪಡಿಸಿದಂತೆ, ಎಲ್ಲ ವಿದ್ಯುತ್ ಸರಕುಗಳು, ಸಲಕರಣೆಗಳು, ಉಪಕರಣಗಳು ಮತ್ತು ಸಾಮಗ್ರಿಗಳು	2	,,

ಅನುಬಂಧ VI

ಕ್ರಮ ಸಂಖ್ಯೆ	ಸರಕಿನ ಹೆಸರು	ಪ್ರಸಕ್ತ ಮೂಲ ದರ	ಪ್ರಸ್ತಾವಿತ ಏಕ ಹಂತ ದರ
		ಶೇಕಡ	ಶೇಕಡ
1.	ಹುಣಸೆಹಣ್ಣು ಮತ್ತು ಹುಣಸೆ ಹಣ್ಣಿನ ಬೀಜಗಳು	5	6
2.	ಶುದ್ಧಗೊಳಿಸಿದ ಹತ್ತಿ ಬೀಜದ ಎಣ್ಣೆ	5	2
3.	ಬೆರಳಚ್ಚು ಯಂತ್ರದ ರಿಬ್ಬನ್	5	10
4.	ಎಲ್ಲ ತರಹದ ಜರಿ	5	4
5.	ಅಲ್ಯುಮಿನಿಯಂ ಸುರಳಿಗಳು ಮತ್ತು ಹಾಳೆಗಳು	5	6
6.	ಬೋಲ್ಟ್ ತಂದಿಗಳು, ಸ್ಕ್ರೂಸ್ಟಡಿಂಗ್, ಸ್ವಯಂ ಒಳತಿರುಪುಳ್ಳ ಸ್ಕ್ರೂಗಳು, ಸ್ಕ್ರೂ ಕೊಕ್ಕೆಗಳು, ಸ್ಕ್ರೂ ರಿಂಗುಗಳು ಮತ್ತು ಮೊಳೆಗಳೂ ಸೇರಿದಂತೆ ಥ್ರೆಡ್‌ಗಳಿರುವ ಅಥವಾ ಒಳ ತಿರುಪುಗಳಿರುವ ಬೋಲ್ಟುಗಳು, ರಿವೆಟ್ಟುಗಳು ಮತ್ತು ನಟ್ಟುಗಳು ಮತ್ತು ಮೂಲ ಲೋಹಗಳ ಅಥವಾ ಅದರ ಮಿಶ್ರ ಲೋಹಗಳ ತಿರುಗಣೆಗಳು ಅಥವಾ ಸ್ಕ್ರೂಗಳು	5	8
7.	ಎರಡನೆಯ ಅನುಸೂಚಿಯ ನಮೂದುಗಳಲ್ಲಿ ಒಳಗೊಳ್ಳದ ನೆಲಬಿಲ್ಲೆ, ಗೋಡೆಬಿಲ್ಲೆ ಮತ್ತು ಮೇಲ್ಹಾವಣಿ ಬಿಲ್ಲೆ	5	12
8.	ಸತುಲೇಪಿತ ಕಬ್ಬಿಣದ ಬಕೆಟ್ಟುಗಳು	5	6
9.	ತೂಕದ ಯಂತ್ರಗಳು ಮತ್ತು ಅದರ ಭಾಗಗಳು	5	10
10.	ಸುಗಂಧದ ಸಂಪಾರಿ	5	6
11.	ತಾಮ್ರದ ಸುರುಳಿಗಳು ಮತ್ತು ಹಾಳೆಗಳು	5	6
12.	ಎರಡನೆ ಅನುಸೂಚಿಯ ಯಾವುದೇ ನಮೂದುಗಳಲ್ಲಿ ಬರದ ವಾಸನೆ ನಿವಾರಕಗಳು, ಸೋಂಕು ನಿವಾರಕಗಳು ಮತ್ತು ಜೀವಾಣು ನಾಶಕಗಳು.	5	10
13.	ಹರಳೆಣ್ಣೆ	5	4
14.	ಹುದುಗು (ಈಸ್ಟ್) (i) ಅಕುಂಚಿತ ಹಸಿ ಹುದುಗು	5	2
	(ii) ಒಣ ಹುದುಗು	5	6
15.	ಜಾಮೂನು ಮಿಶ್ರಣ, ಇಡ್ಲಿ ಮಿಶ್ರಣ, ದೋಸೆ ಮಿಶ್ರಣ ಮತ್ತು ಅಂತಹುದೇ ಇತರ ಮಿಶ್ರಣಗಳ ಸಿದ್ಧ ಆಹಾರ ಪದಾರ್ಥಗಳು.	5	10
16.	ಅಕ್ಕಿ, ಸೋಜಿ	5	4
17.	ಜೀರಿಗೆ, ಮೆಂತ್ಯ, ಗಸಗಸೆ, ಅರಿಶಿಣ, ಲವಂಗ, ದಾಲ್ಚಿನ್ನಿ	5	4
18.	ಪಾದರಕ್ಷೆಗಳ ಪಾಲೀಷ್	5	12

ಅನುಬಂಧ-VII

ಫೋಟೋ ಪ್ರಯೋಗಾಲಯಗಳು, ಛಾಯಾಚಿತ್ರ ಸಂಸ್ಕರಣ ಪ್ರಯೋಗಾಲಯಗಳು ಮತ್ತು ಸ್ಟುಡಿಯೋಗಳು	ಪ್ರತಿ ವರ್ಷಕ್ಕೆ 250 ರೂ.
ರಾಜ್ಯ ಅಥವಾ ಕೇಂದ್ರ ಸರ್ಕಾರ ನಡೆಸುವುದನ್ನು ಹೊರತುಪಡಿಸಿ ನರ್ಸಿಂಗ್ ಹೋಮ್‌ಗಳು, ಪರೀಕ್ಷಾ ಪ್ರಯೋಗಾಲಯಗಳು ಮತ್ತು ಆಸ್ಪತ್ರೆಗಳು	ಪ್ರತಿ ವರ್ಷಕ್ಕೆ 250 ರೂ.
ಸೌಂದರ್ಯವರ್ಧಕ ಗೃಹಗಳು, ಡ್ರೈಕ್ಲೀನರುಗಳು ಮತ್ತು ಒಳಾಂಗಣ ಅಲಂಕಾರಿಕರು	ಪ್ರತಿವರ್ಷಕ್ಕೆ 250 ರೂ.
ಚಲಚ್ಚಿತ್ರ ವಿತರಕರು, ಟ್ರಾವಲ್ ಏಜೆಂಟರು ಮತ್ತು ಪತ್ರಿಕೋದ್ಯಮಿಗಳು	ಪ್ರತಿ ವರ್ಷಕ್ಕೆ 250 ರೂ.

ಅನುಬಂಧ—VIII

ಅನುಸೂಚಿ

(3ನೇ ಪ್ರಕರಣ ನೋಡಿ)

ಕೃಷಿ ವರಮಾನ ತೆರಿಗೆಗಳು

ಭಾಗ—II

ಕಂಪನಿಯಲ್ಲದ ವ್ಯಕ್ತಿಯ ಸಂದರ್ಭದಲ್ಲಿ, ಒಟ್ಟು ಕೃಷಿ ವರಮಾನ 20,000 ರೂಗೆ ಮೀರದಿರುವಲ್ಲಿ	'ಏನೂ ಇಲ್ಲ'
ಒಟ್ಟು ಕೃಷಿ ವರಮಾನ 20,000 ರೂಗೆ ಮೀರಿದ್ದು ಆದರೆ 35,000 ರೂಗೆ ಮೀರದಿರುವಲ್ಲಿ	20,000 ರೂಗೆ ಮೀರುವ ಒಟ್ಟು ವರಮಾನದ ಮೇಲೆ ಶೇ $12\frac{1}{2}$ ಯಷ್ಟು.
ಒಟ್ಟು ಕೃಷಿ ವರಮಾನ 35,000 ರೂಗೆ ಮೀರಿದ್ದು ಆದರ 50,000 ರೂಗೆ ಮೀರದಿರುವಲ್ಲಿ	1875 ರೂ. ಮತ್ತು 35,000 ರೂಗೆ ಮೀರುವ ಒಟ್ಟು ವರಮಾನ ಮೇಲೆ ಶೇಕಡಾ 20 ರಷ್ಟು
ಒಟ್ಟು ಕೃಷಿ ವರಮಾನ 50,000 ರೂಗೆ ಮೀರಿದ್ದು ಆದರೆ 75,000 ರೂಗೆ ಮೀರದಿರುವಲ್ಲಿ	4875 ರೂ. ಮತ್ತು 50,000 ರೂಗೆ ಮೀರುವ ಒಟ್ಟು ವರಮಾನದ ಮೇಲೆ ಶೇಕಡಾ 30 ರಷ್ಟು
ಒಟ್ಟು ಕೃಷಿ ವರಮಾನ 75,000 ರೂಗೆ ಮೀರಿದ್ದು ಆದರೆ 1,00,000 ರೂಗೆ ಮೀರದಿರುವಲ್ಲಿ	9375 ರೂ. ಮತ್ತು 75,000 ರೂಗೆ ಮೀರುವ ಒಟ್ಟು ವರಮಾನದ ಶೇಕಡಾ 40 ರಷ್ಟು
ಒಟ್ಟು ಕೃಷಿ ವರಮಾನ 1,00,000 ರೂ. ಮೀರುವಲ್ಲಿ	19,375 ರೂ. ಮತ್ತು 1,00,000 ರೂಗೆ ಮೀರುವ ಒಟ್ಟು ವರಮಾನದ ಮೇಲೆ ಶೇಕಡಾ 50 ರಷ್ಟು.

ಅನುಬಂಧ—IX

ಭಾಗ—II

ಒಂದು ಕಂಪನಿಯ ಸಂದರ್ಭದಲ್ಲಿ,

ಒಟ್ಟು ಕೃಷಿ ವರಮಾನ 20,000 ರೂ. ಗೆ ಮೀರದಿರುವಲ್ಲಿ	ಏನೂ ಇಲ್ಲ
ಒಟ್ಟು ಕೃಷಿ ವರಮಾನ 20,000 ರೂ. ಗೆ ಮೀರಿದ್ದು ಆದರೆ 50,000 ರೂ. ಗೆ ಮೀರದಿರುವಲ್ಲಿ	20,000 ರೂ. ಗೆ ಮೀರುವ ಒಟ್ಟು ವರಮಾನದ ಮೇಲೆ ಶೇಕಡ 30 ರಷ್ಟು
ಒಟ್ಟು ಕೃಷಿ ವರಮಾನ 50,000 ರೂ. ಗೆ ಮೀರಿದ್ದು ಆದರೆ 1,00,000 ರೂ. ಗೆ ಮೀರದಿರುವಲ್ಲಿ	9,000 ರೂ. ಮತ್ತು 50,000 ರೂ. ಗೆ ಮೀರುವ ಒಟ್ಟು ವರಮಾನದ ಮೇಲೆ ಶೇಕಡ 45 ರಷ್ಟು
ಒಟ್ಟು ಕೃಷಿ ವರಮಾನ 1,00,000 ರೂ. ಗೆ ಮೀರಿದ್ದು ಆದರೆ 5,00,000 ರೂ. ಗೆ ಮೀರದಿರುವಲ್ಲಿ	31,500 ರೂ. ಮತ್ತು 1,00,000 ರೂ. ಗೆ ಮೀರುವ ಒಟ್ಟು ವರಮಾನದ ಶೇಕಡ 55 ರಷ್ಟು
ಒಟ್ಟು ಕೃಷಿ ವರಮಾನ 5,00,000 ರೂ. ಗೆ ಮೀರಿದ್ದು ಆದರೆ 10,00,000 ರೂ. ಗೆ ಮೀರದಿರುವಲ್ಲಿ	2,51,500 ರೂ. ಮತ್ತು 5,00,000 ರೂ. ಗೆ ಮೀರುವ ಒಟ್ಟು ವರಮಾನದ ಮೇಲೆ ಶೇಕಡ 60 ರಷ್ಟು
ಒಟ್ಟು ಕೃಷಿ ವರಮಾನ 10,00,000 ರೂ. ಗೆ ಮೀರುವಲ್ಲಿ	5,51,500 ರೂ. ಮತ್ತು 10,00,000 ರೂ. ಗೆ ಮೀರುವ ಒಟ್ಟು ವರಮಾನದ ಮೇಲೆ ಶೇಕಡ 65 ರಷ್ಟು.

ಅನುಬಂಧ X

ಕಾಫಿ ವ್ಯವಸಾಯ ಆದಾಯ ತೆರಿಗೆಯ ರಾಜಿ ದರಗಳು :

ಭೂಮಿಯ ವಿಸ್ತೀರ್ಣ 15 ಎಕರೆ ಮೀರದಿದ್ದರೆ	ಇಲ್ಲ
ಭೂಮಿಯ ವಿಸ್ತೀರ್ಣ 15 ಎಕರೆಯನ್ನು ಮೀರಿದ್ದು 20 ಎಕರೆಯನ್ನು ಮೀರದಿದ್ದರೆ	1500 ರೂಪಾಯಿಗಳು
ಭೂಮಿಯ ವಿಸ್ತೀರ್ಣವು 20 ಎಕರೆಗಳನ್ನು ಮೀರಿದ್ದು 25 ಎಕರೆಗಳನ್ನು ಮೀರದಿದ್ದರೆ	2500 ರೂಪಾಯಿಗಳು

ಅನುಬಂಧ XI
ಮೋಟಾರು ವಾಹನಗಳು

ಬಾಬು	(ಒಂದು ತ್ರೈಮಾಸಿಕಕ್ಕೆ) ಈಗಿರುವುದು	(ಒಂದು ತ್ರೈಮಾಸಿಕಕ್ಕೆ) ಪ್ರಸ್ತಾವಿತ
1	2	3
1. ದ್ವಿಚಕ್ರ ವಾಹನಗಳು		
(ಎ) 50 ಸಿ.ಸಿ. ಮತ್ತು ಅದಕ್ಕೂ ಕಡಿಮೆ	19.20	20.00
(ಬಿ) 50 ಸಿ.ಸಿ.ಗೆ ಮೇಲ್ಪಟ್ಟು 300 ಸಿ.ಸಿ.ವರೆಗೆ	19.20	30.00
(ಸಿ) 300 ಸಿ ಸಿ.ಗೆ ಮೇಲ್ಪಟ್ಟು	24.00	40.00
2. ಆಟೋರಿಕ್ಷಾಗಳು	52.00	ಬದಲಾವಣೆ ಇಲ್ಲ
3. ಟ್ಯಾಕ್ಸಿಗಳು (5+1 ಆಸನಗಳು)	117.00	150.00
4. ಟ್ಯಾಕ್ಸಿಗಳು (6+1 ಆಸನಗಳು)	260.00/ವಾಹನ	1250.00/ತ್ರೈಮಾಸಿಕ/ವಾಹನ
5. ಮಜಲು ವಾಹನಗಳು		
(ಎ) ಪಟ್ಟಣ/ನಗರ ಸಾರಿಗೆ	169.00	200/ಆಸನ/ತ್ರೈಮಾಸಿಕ
(ಬಿ) ದಿನಕ್ಕೆ 100 ಕಿ.ಮಿ.ಗೂ ಕಡಿಮೆ ಓಡುವ ಗ್ರಾಮಾಂತರ ಸಾರಿಗೆ	169.00	200/ಆಸನ/ತ್ರೈಮಾಸಿಕ
(ಸಿ) ದಿನಕ್ಕೆ 100 ಕಿ.ಮಿ.ಗೂ ಹೆಚ್ಚು ದೂರ ಓಡುವ ಗ್ರಾಮಾಂತರ ಸಾರಿಗೆ	208.00	250/ಆಸನ/ತ್ರೈಮಾಸಿಕ
(ಡಿ) ಎಲ್ಲ ಸ್ಟ್ಯಾಂಡಿಗಳು	58.50	100/ಪ್ರತಿ ಸ್ಟ್ಯಾಂಡೀ/ತ್ರೈಮಾಸಿಕ

6.	ವಿಶೇಷ ಪರ್ಮಿಟ್ಟಿನ ಮೇಲೆ ನಡೆಸುವ ಬಸ್ಸುಗಳು	208.00	500/ಆಸನ/ತ್ರೈಮಾಸಿಕ
7.	ಅಖಿಲ ಭಾರತ ಪ್ರವಾಸಿ ಅಮ್ನಿ ಬಸ್ಸುಗಳು	234.00	500/ಆಸನ/ತ್ರೈಮಾಸಿಕ
8.	ಕರಾರು ವಾಹನಗಳು	234.00	500/ಆಸನ/ತ್ರೈಮಾಸಿಕ
9.	ಅಮ್ನಿ ಬಸ್ಸುಗಳು		
	(ಎ) ಹತ್ತು ಆಸನಗಳವರೆಗೆ	60.00	80/ಆಸನ/ತ್ರೈಮಾಸಿಕ
	(ಬಿ) ಹತ್ತು ಆಸನಗಳನ್ನು ಮೀರಿ	120.00	200/ಆಸನ/ತ್ರೈಮಾಸಿಕ
10.	ಕಂಪನಿಗಳ ಸ್ವಾಮ್ಯದ ಕಾರುಗಳು—ಹೇರು ರಹಿತ ಭಾರ	1500 ಕಿ.ಗ್ರಾಂ.ವರೆಗೆ 90	270
		1500 ಕಿ.ಗ್ರಾಂ. ಮೀರಿ 120	360
11.	1970 ಮತ್ತು ನಂತರದ ಮಾದರಿಯ ಆಮದು ಮಾಡಿಕೊಂಡ ವಿದೇಶಿ ಕಾರುಗಳು ಹೇರು ರಹಿತ ಭಾರ	1500 ಕಿ.ಗ್ರಾಂ. ವರೆಗೆ 90	180
		1500 ಕಿ.ಗ್ರಾಂ. ಮೀರಿ 120	240

ಅನುಬಂಧ XII

1985-86ಕ್ಕೆ ಒಟ್ಟು ಹೆಚ್ಚಿನ ಸಂಪನ್ಮೂಲ ಸಂಗ್ರಹಣಾ ಕ್ರಮಗಳು

	ರೂಪಾಯಿಗಳು ಕೋಟಿಗಳಲ್ಲಿ
(1) ಮಾರಾಟ ತೆರಿಗೆ	37
(2) ಅಬ್ಕಾರಿ	8
(3) ಮೋಟಾರು ವಾಹನ ತೆರಿಗೆ	5
ಒಟ್ಟು	50

ಆಯವ್ಯಯ ಪತ್ರಗಳಿಗೆ ಸೂಚನಾ ಟಿಪ್ಪಣಿ

(೧೯೮೫ನೇ ಜುಲೈ)

೧೯೮೫ನೇ ಮಾರ್ಚ್ ತಿಂಗಳಿನಲ್ಲಿ ತಾತ್ಕಾಲಿಕ ಆಯವ್ಯಯವನ್ನು ಮಂಡಿಸಿದ್ದು ಅದಕ್ಕೆ ಪೂರಕವಾದ ಆಯವ್ಯಯ ಪತ್ರಗಳನ್ನು ಸಹಾ ಆಗ ಮಂಡಿಸಲಾಗಿತ್ತು. ೧೯೮೫–೮೬ನೇ ಸಾಲಿನ ಅಂತಿಮ ಆಯವ್ಯಯದಲ್ಲಿ ಮಾಡಿರುವ ಬದಲಾವಣೆಗಳನ್ನು ಮಾತ್ರ ಈಗ ಮಂಡಿಸಲಾಗುತ್ತಿದೆ. ೧೯೮೫ನೇಯ ಮಾರ್ಚ್ ತಿಂಗಳಿನಲ್ಲಿಯೇ ಮಂಡಿಸಲಾದ ಆಯವ್ಯಯ ಪತ್ರಗಳು ಮತ್ತು ೧೯೮೫ನೇ ಜುಲೈ ತಿಂಗಳಿನಲ್ಲಿ ಮಂಡಿಸಲಾದ ಹೆಚ್ಚಿನ/ಬದಲಾವಣೆ ಮಾಡಿದ ಪತ್ರಗಳನ್ನು ಮಾಹಿತಿಗಾಗಿ ಈ ಕೆಳಗೆ ತೋರಿಸಲಾಗಿದೆ.

೧. ವಾರ್ಷಿಕ ವಿತ್ತ ನಿರೂಪಣೆ	ವಾರ್ಷಿಕ ವಿತ್ತ ನಿರೂಪಣೆ (ಅಂತಿಮ) ಎಂಬ ಬದಲಾವಣೆಯೊಂದಿಗೆ ಪುನಃ ಮುದ್ರಿಸಲಾಗಿದೆ.
೨. ರಾಜಸ್ವ ಮತ್ತು ಇತರ ಜಮೆಗಳ ಸವಿವರ ಅಂದಾಜುಗಳು ೩. ಆಯವ್ಯಯ ಸವಿವರ ಅಂದಾಜುಗಳು ಸಂಪುಟ—I	೧೯೮೫–೮೬ನೇ ಸಾಲಿನ ರಾಜಸ್ವ ಮತ್ತು ವ್ಯಯದ ಅಂದಾಜಿನ ಸಂಗ್ರಹ (ಅಂತಿಮ) ಎಂಬ ಸಂಪುಟದಲ್ಲಿ ಅಂದಾಜುಗಳನ್ನು ಕೊಡಲಾಗಿದೆ.
೪. ಆಯವ್ಯಯ ಸವಿವರ ಅಂದಾಜುಗಳು ಸಂಪುಟ—II ೫. ಆಯವ್ಯಯ ಸವಿವರ ಅಂದಾಜುಗಳು ಸಂಪುಟ—III ೬. ನೀರಾವರಿ ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಕಾಮಗಾರಿಗಳು ಸವಿವರ ಅಂದಾಜುಗಳು (ಅನುಬಂಧ–ಇ ಹೊರತಾಗಿ)	೧೯೮೫–೮೬ನೇ ಸಾಲಿಗೆ ರಾಜಸ್ವ ಮತ್ತು ವ್ಯಯಗಳ ಅಂದಾಜುಗಳ ಬದಲಾವಣೆಗಳು (ಅಂತಿಮ) ಎಂಬ ಸಂಪುಟದಲ್ಲಿ ತಾತ್ಕಾಲಿಕ ಆಯವ್ಯಯಕ್ಕೆ ಮಾಡಿದ ಬದಲಾವಣೆಗಳ ವಿವರಣೆಯನ್ನು ಕ್ರೋಡೀಕರಿಸಲಾಗಿದೆ

೭.	ನೀರಾವರಿ, ರಸ್ತೆಗಳು ಮತ್ತು ಸೇತುವೆಗಳ ಸವಿವರ ಅಂದಾಜುಗಳು ಅನುಬಂಧ—೩	ಪ್ರತ್ಯೇಕ ಸಂಪುಟದಲ್ಲಿ ಪುನಃ ಮುದ್ರಿಸಲಾಗಿದೆ.
೮.	ಲೋಕೋಪಯೋಗಿ ಕಾಮಗಾರಿಗಳ ಸವಿವರ ಅಂದಾಜುಗಳು (ಕಟ್ಟಡಗಳು) ಅನುಬಂಧ—೩	ಪ್ರತ್ಯೇಕ ಸಂಪುಟದಲ್ಲಿ ಪುನಃ ಮುದ್ರಿಸಲಾಗಿದೆ.
೯.	ನೀರಾವರಿ ಮತ್ತು ಕಾಮಗಾರಿಗಳು ಗ್ರಾಮಾಂತರ ನೀರು ಪೂರೈಕೆ ಯೋಜನೆ ಅನುಬಂಧ—೩	ಪ್ರತ್ಯೇಕ ಸಂಪುಟದಲ್ಲಿ ಪುನಃ ಮುದ್ರಿಸಲಾಗಿದೆ.
೧೦.	ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಲಾಗಿರುವ ಹಣದ ಸವಿವರ	ಪ್ರತ್ಯೇಕ ಸಂಪುಟದಲ್ಲಿ ಪುನಃ ಮುದ್ರಿಸಲಾಗಿದೆ.
೧೧.	ಸಂಕ್ಷಿಪ್ತ ಅನುದಾನಗಳ ಅಭಿಯಾಚನೆಗಳು ಭಾಗ—೧	ಪ್ರತ್ಯೇಕ ಸಂಪುಟದಲ್ಲಿ ಪುನಃ ಮುದ್ರಿಸಲಾಗಿದೆ.
೧೨.	ಸಂಕ್ಷಿಪ್ತ ಅನುದಾನಗಳ ಅಭಿಯಾಚನೆಗಳು ಭಾಗ—೨	ಪ್ರತ್ಯೇಕ ಸಂಪುಟದಲ್ಲಿ ಪುನಃ ಮುದ್ರಿಸಲಾಗಿದೆ.
೧೩.	ಜಿಲ್ಲಾ ಯೋಜನೆ	ಹೊಸ ಸಂಪುಟ
೧೪.	ಆಯವ್ಯಯ ಜ್ಞಾಪನ ಪತ್ರ	ಪುನಃ ಮುದ್ರಿಸಿಲ್ಲ

ಸಭಾಧ್ಯಕ್ಷರು.—ಇಂದಿನ ಸಭೆಯನ್ನು ಮುಕ್ತಾಯಗೊಳಿಸಿ, ೨೨ನೇ ಜುಲೈ ೧೯೮೫ ಸೋಮವಾರ ಬೆಳಗ್ಗೆ ೧೧-೦೦ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ಮಧ್ಯಾಹ್ನ ೨ ಗಂಟೆ ೩೦ ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ ೨೨ನೇ ಜೂನ್ ೧೯೮೫ನೇ ಸೋಮವಾರ ಬೆಳಗ್ಗೆ ೧೧-೦೦ ಗಂಟೆಗೆ ಸೇರಲು ನಿರ್ಧರಿಸಿತು.)

೧೬೪